# ಭಾರತೀಯ ಜನತಾ ಪಾರ್ಟಿ
# ರಾಷ್ಟ್ರೀಯ ಪರಿಷತ್ ಸಭೆ
# 2–3 ಮಾರ್ಚ್ 2013
# ತಾಲ್ ಕೊಟೋರ ಕ್ರೀಡಾಂಗಣ, ನವದೆಹಲಿ

## ಅಧ್ಯಕ್ಷೀಯ ಭಾಷಣ

ಸ್ನೇಹಿತರೆ, ರಾಷ್ಟ್ರೀಯ ಅಧ್ಯಕ್ಷನಾಗಿ ಮತ್ತೊಮ್ಮೆ ಕರ್ತವ್ಯವನ್ನು ವಹಿಸಿಕೊಂಡ ನಂತರ, ದೇಶದ ವಿವಿಧ ಭಾಗಗಳಿಂದ ಬಂದಿರುವ ಕಾರ್ಯಕರ್ತರನ್ನು ಇದೇ ಮೊದಲ ಬಾರಿ ಭೇಟಿಯಾಗುತ್ತಿದ್ದೇನೆ. ಇದೊಂದು ಮನತಣಿಸುವ ಸಂದರ್ಭವಾಗಿದ್ದರೂ, ಹೊಣೆಗಾರಿಕೆಯ ಭಾವನೆಯಿಂದ ತುಂಬಿದೆ. ಕಾರ್ಯಕರ್ತರ ಮತ್ತು ದೇಶವಾಸಿಗಳ ಅಭಿಲಾಷೆಗಳನ್ನು ಈಡೇರಿಸಲು ನಾವು ಈ ಮುಂದೆ ಎದುರಿಸಬೇಕಾದ ಸವಾಲುಗಳನ್ನು ಮನಗಂಡು ಈ ಹೊಣೆಗಾರಿಕೆಯ ಭಾವನೆ ಮೂಡಿದೆ.

ಸ್ನೇಹಿತರೆ, ರಾಷ್ಟ್ರೀಯ ಪರಿಷತ್ತಿನ ಸಭೆ ನಡೆಯುತ್ತಿರುವ ಈ ಕ್ಷಣ, ಎರಡು ಪ್ರಮುಖ ಐತಿಹಾಸಿಕ ಸಂದರ್ಭಗಳಿಗೆ ಸಾಕ್ಷಿಯಾಗಿದೆ. ಒಂದು, ತೀರ್ಥ ಪ್ರಯಾಗದ ಮಹಾಕುಂಭ ಉತ್ಸವ ಪ್ರಗತಿಯಲ್ಲಿರುವುದು ಮತ್ತೆ ಇನ್ನೊಂದು ಇಡೀ ರಾಷ್ಟ್ರ ಸ್ವಾಮಿ ವಿವೇಕಾನಂದರ 150ನೇ ಜಯಂತಿಯನ್ನು ಆಚರಿಸುತ್ತಿರುವುದು. ಮಾಹಾಕುಂಭ ಉತ್ಸವ ವಿಶ್ವದ ಅತಿ ದೊಡ್ಡ ಘಟನೆಯಾಗಿರುವ ಜೊತೆಗೆ ಮಾನವಕೋಟಿಯ ಇತಿಹಾಸದ ಬಹು ಮುಖ್ಯ ಘಟ್ಟವಾಗಿದೆ. ಅದರ ಮಹಾನತೆ ಮತ್ತು ಮುಂದುವರಿಕೆಯು ಭಾರತ ದೇಶದ ಜನಜೀವನದ ನಿರಂತರ ಬಲಾಢ್ಯತೆಯ ಸಂಕೇತಗಳಾಗಿವೆ. ಯುವ ಸನ್ಯಾಸಿಯಾಗಿದ್ದ ಸ್ವಾಮಿ ವಿವೇಕಾನಂದ ಅವರು 1892ರಲ್ಲಿ ತಮ್ಮ 29ನೇ ವಯಸ್ಸಿನಲ್ಲಿ ಅಮೇರಿಕಾಗೆ ಭೇಟಿ ನೀಡಿ ಭಾರತೀಯ ಧರ್ಮ ಹಾಗೂ ಸಿದ್ಧಾಂತದ ಮಹತ್ವವನ್ನು ಅಲ್ಲಿ ಸಾರಿದಾಗ, ಇಡೀ ಭಾರತ ದೇಶದಲ್ಲಿ ಆಗ ಹೊಸ ಜಾಗೃತಿ ಹಾಗೂ ಶಕ್ತಿಯ ಪ್ರಸರಣವಾಯಿತು. ಈ ಮೂಲಕ ಭಾರತದ ಇತಿಹಾಸ ಹೊಸ ರೂಪ ಪಡೆಯಲು ಆರಂಭವಾಯಿತು. ಈ ಒಂದು ಬದಲಾವಣೆಯ ಕುರಿತು ಪಂಡಿತ್ ಜವಹರ್‌ಲಾಲ್ ನೆಹರು ಅವರು ತಮ್ಮ ಜನಪ್ರಿಯ ಕೃತಿ 'ಡಿಸ್ಕವರಿ ಆಫ್ ಇಂಡಿಯ'(ಪುಟ–337)ದಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ: "ಮನಗುಂದಿದ ಹಾಗೂ ಆತ್ಮವಿಶ್ವಾಸದ ಕೊರತೆಯಿಂದ ಕಳೆಗುಂದಿದ ಭಾರತೀಯ ಮನಸ್ಸಿಗೆ ವಿವೇಕಾನಂದ ಅವರು ಹೊಸ ಚೈತನ್ಯ ತುಂಬಿದ್ದಲ್ಲದೆ ಸ್ವಾವಲಂಬನೆ ಹಾಗೂ ಭೂತಕಾಲದ ಬೇರುಗಳ ಭದ್ರ ತಳಪಾಯವನ್ನು ನೀಡಿದರು".

ಇಂದಿನ ಯುವಕರು ಜಾಗತೀಕರಣದ ಈ ಹೊಸ ಯುಗದಲ್ಲಿ ಭಾರತವನ್ನು ಹೊಸ ಎತ್ತರಕ್ಕೆ ಸಾಗಿಸುವ ಅಭಿಲಾಷೆಯನ್ನು ಹೊಂದಿದ್ದಾರೆ. ಯುವ ಸನ್ಯಾಸಿಯಂತೆ ವಿವೇಕಾನಂದ ಅವರು 19ನೇ ಶತಮಾನದಲ್ಲಿ ಭಾರತಕ್ಕೆ ಜಾಗತಿಕ ಮಾನ್ಯತೆಯನ್ನು ಕೊಡಿಸಿದ್ದು, ಒಂದು ರೀತಿಯಲ್ಲಿ ಜಾಗತೀಕರಣವನ್ನು ಅರ್ಥಮಾಡಿಕೊಂಡು ಅದರ ಅಭಿಲಾಷೆಗಳಿಗೆ ಅನುರೂಪವಾಗಿ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದ ಆಧುನಿಕ ಬಾರತದ ಮೊದಲ ಯುವಚೇತನ ಎಂದು ಹೇಳಬಹುದು. **ಆದಕಾರಣ ಆಧುನಿಕ ಭಾರತದ ಮೊದಲ ಜಾಗತಿಕ ಯುವಕ ಸ್ವಾಮಿ ವಿವೇಕಾನಂದರಾಗಿದ್ದರು.** ಆದ್ದರಿಂದ ಈ ಒಂದು ಕ್ಷಣವು ಯುವ

ಶಕ್ತಿಯೊಂದಿಗೆ ಧಾರ್ಮಿಕ ಹಾಗೂ ರಾಷ್ಟ್ರೀಯ ಘನತೆಯ ಪ್ರಜ್ಞೆ ಮೂಡಿದ್ದು, ಭಾಜಪದ ರಾಜಕೀಯ ಸಿದ್ಧಾಂತ ಹಾಗೂ ಚಿಂತನಾ ಸಾರವೂ ಅದೇ ಆಗಿದೆ.

ಆದರೆ, ಕೆಲವು ಅಹಿತಕರ ಘಟನೆಗಳು ಇದರೊಂದಿಗೆ ಕಲೆತಿವೆ. ಮಹಾಕುಂಭ ನಡೆಯುತ್ತಿದ್ದಾಗ, ಮೌನ ಅಮಾವಸ್ಯದ ದಿನ ಹಲವಾರು ಭಕ್ತರು ತಮ್ಮ ಪ್ರಾಣ ಕಳೆದುಕೊಂಡರು ಹಾಗೂ ಕೆಲವು ದಿವಸಗಳ ಹಿಂದೆ ಹೈದರಾಬಾದಿನಲ್ಲಿ ಹಲವಾರು ಅಮಾಯಕರು ಬಾಂಬ್ ಸ್ಫೋಟಕ್ಕೆ ತುತ್ತಾದರು. ಪ್ರಯಾಗ್ ಹಾಗೂ ಹೈದರಾಬಾದಿನಲ್ಲಿ ಅಸುನೀಗಿದವರಿಗೆ, ಭಾಜಪ ಪರವಾಗಿ ನನ್ನ ಸಂತಾಪ ವ್ಯಕ್ತಪಡಿಸುತ್ತೇನೆ.

ಸ್ನೇಹಿತರೆ, ಕಳೆದ ಕೆಲವು ತಿಂಗಳಲ್ಲಿ ನಾವು ಕೇಳಿದ ಸವಿಸುದ್ದಿಗಳಲ್ಲಿ ಮುಖ್ಯವಾದದ್ದೆಂದರೆ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಅಮೋಘ ಜಯ. 1995ರಿಂದಲೂ ಗುಜರಾತ್ ಚುನಾವಣೆಯಲ್ಲಿ ನಾವು ಗೆಲ್ಲುತ್ತಾ ಬಂದಿದ್ದರೂ, ಜನಪ್ರಿಯ ಮುಖ್ಯಮಂತ್ರಿ ಶ್ರೀ ನರೇಂದ್ರ ಭಾಯಿ ಮೋದಿಯವರ ನೇತೃತ್ವದಲ್ಲಿ ಸತತ ಮೂರನೇ ಬಾರಿ ಐತಿಹಾಸಿಕ ಜಯ ಗಳಿಸಿರುವುದು ವಿಶೇಷ. ದೀರ್ಘಾವಧಿಯವರೆಗು ಆಳ್ವಿಕೆ ನಡೆಸುವ ಅವಕಾಶ ಲಭಿಸಿದಲ್ಲಿ ಭಾಜಪ ಗಳಿಸಬಲ್ಲ ಯಶಸ್ಸಿನ ಸಾಮರ್ಥ್ಯಕ್ಕೂ ವಿವಿಧ ಅನ್ಯ ರಾಜಕೀಯ ಪಕ್ಷಗಳ ಸಾಮರ್ಥ್ಯಕ್ಕೂ ಇರುವ ವತ್ಯಾಸವನ್ನು ಗುಜರಾತಿನಲ್ಲಿ ಪ್ರಮಾಣೀಕರಿಸಿದ್ದೇವೆ. ಹ್ಯಾಟ್ರಿಕ್ ಸಾಧನೆ ಮಾಡಿದ ನರೇಂದ್ರ ಮೋದಿಯವರಿಗೆ ನಮ್ಮ ಅಭಿನಂದನೆಗಳು.

ಸ್ನೇಹಿತರೆ, ಭಾರತದ ಮುಖ್ಯ ವಿರೋಧ ಪಕ್ಷದ ಕಾರ್ಯಕರ್ತರು ನಾವಾಗಿದ್ದೇವೆ. ದೇಶದ ಮುಂದೆ ಗಂಭೀರ ಸವಾಲುಗಳಿವೆ. ಈ ಸವಾಲುಗಳನ್ನು ಹತ್ತಿಕ್ಕಲು ದೇಶದ ಜನ ನಮ್ಮತ್ತ ನೋಡುತ್ತಿದ್ದಾರೆ.

ಈ ದೇಶದ ಜನಸಾಮಾನ್ಯರು ಹಲವಾರು ಚಿಂತೆಗಳ ಭಾರ ಹೊತ್ತಿದ್ದಾರೆ. ದೈನಂದಿನ ಜೀವನ ದುಸ್ತರವಾಗುತ್ತಿದೆ. ದೇಶದ ಒಳಗೆ ಹಾಗೂ ಗಡಿಭಾಗದಲ್ಲಿ ದೊಡ್ಡ ಸವಾಲುಗಳಿವೆ. **ದೇಶ ಸೊರಗಿದೆ, ಬಸವಳಿದಿದೆ, ಸ್ಥೈರ್ಯಗುಂದಿದೆ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಕುರಿತು ಜನರು ಆಕ್ರೋಷಗೊಂಡಿದ್ದಾರೆ. ಅವರಿಗೆ ಬದಲಾವಣೆ ಬೇಕಾಗಿದೆ. ಪರ್ಯಾಯ ವ್ಯವಸ್ಥೆಯ ಅನ್ವೇಷಣೆ ನಡೆದಿದೆ.**

ಪ್ರಸ್ತುತ ಪರಿಸ್ಥಿತಿಯಲ್ಲಿ ಯುಪಿಎ ಪರ್ಯಾಯವೆಂದರೆ ಭಾಜಪ ನೇತೃತ್ವದ ಎನ್‌ಡಿಎ ಒಕ್ಕೂಟ. ಸಮಯ ಕೂಡಿಬಂದಿದೆ. ಕೇವಲ ನಮ್ಮ ಅಪೇಕ್ಷಿತ ನಡೆಯ ಬಯಕೆಯಿದೆ.

ಪ್ರತಿಷ್ಠಿತರಾದ ಅಟಲ್ ಅವರು ಸಕ್ರಿಯರಿಲ್ಲದ ಈ ಸಂದರ್ಭದಲ್ಲಿ, ಗೌರವಾನ್ವಿತರಾದ ಅಡ್ವಾಣಿಯವರ ಮಾರ್ಗದರ್ಶನದಲ್ಲಿ, ಕಾರ್ಯಕರ್ತರ ಕಠಿಣ ಪರಿಶ್ರಮದಿಂದ ಹಾಗೂ ನಮ್ಮ ಜನಪ್ರಿಯ ಮತ್ತು ಸಮರ್ಥ ನಾಯಕರ ಕಾರ್ಯತಂತ್ರದಿಂದ, ನಮಗೆ ಜಯ ನಿಷ್ಚಿತ. ನನ್ನ ಈ ಮಾತಿನಲ್ಲಿ ಯಾವುದೇ ಸಂದೇಹವಿಲ್ಲ.

**ದೇಶದ ಪ್ರಸ್ತುತ ಪರಿಸ್ಥಿತಿ**

ಸ್ನೇಹಿತರೆ, ಇಂದು ನಮ್ಮ ದೇಶ ಬೇಸರ ತರುವ ಪರಿಸ್ಥಿತಿಯಲ್ಲಿದ್ದು, ಇದಕ್ಕೆ ಹಲವಾರು ಕಾರಣಗಳಿವೆ. ನಾವು ಯಾವುದೇ ವಲಯ ನೋಡಿದರು, ಅದು ಆರ್ಥಿಕ ಅವ್ಯವಸ್ಥೆಯಿರಬಹುದು, ಬೆಲೆ ಏರಿಕೆ, ಭ್ರಷ್ಟಾಚಾರ, ಅಸಮರ್ಥ ಆಡಳಿತ, ಗೊತ್ತುಗುರಿಯಿಲ್ಲದ ನೀತಿಗಳು, ವಿಫಲ ರಾಯಭಾರ ಹಾಗೂ

ಮಂದಗತಿಯ ಆಂತರಿಕ ಮತ್ತು ವಿದೇಶಾಂಗ ಭದ್ರತೆ, ಇತ್ಯಾದಿ ಕ್ಷೇತ್ರಗಳಲ್ಲಿ ಹೀನಾಯ ಪರಿಸ್ಥಿತಿ ಕಾಣಬಹುದು.

**ಭದ್ರತೆಗೆ ಬೆದರಿಕೆ**

ಕಳೆದ ತಿಂಗಳ ೨೨ರಂದು ಹೈದರಾಬಾದಿನಲ್ಲಿ ಬಾಂಬ್ ಸ್ಫೋಟಗೊಂಡು ಸುಮಾರು 16 ಜನರು ಅಸುನೀಗಿದರು ಹಾಗೂ 100 ಜನರಿಗೆ ಗಂಭೀರ ಅಥವಾ ಅರೆ ಸ್ವರೂಪದ ಗಾಯಗಳಾದವು. ಆದರೆ ಇದು ದೇಶದಲ್ಲಿ ಸಂಭವಿಸಿದ ಇಂತಹ ಮೊದಲ ಘಟನೆಯಲ್ಲ. ಭಯೋತ್ಪಾದಕರ ಧಾಳಿ ಮುಕ್ತ ಒಂದೇ ಒಂದು ರಾಜ್ಯವೂ ಉಳಿದಿಲ್ಲ.

ನಮ್ಮ ದೇಶದಲ್ಲಿ, ಯುಪಿಎ ಸರ್ಕಾರದ ಅವಧಿಯಲ್ಲಿ ಒಂದಾದಮೇಲೊಂದು ಇಂತಹ ಹಲವಾರು ಘಟನೆಗಳು ಘಟಿಸುತ್ತಿವೆ, ಆದರೆ ಮುಂಬೈ ಧಾಳಿ ಪ್ರಕರಣದ ಅಪರಾಧಿ ಕಸಬ್ ಒಬ್ಬನನ್ನು ಬಿಟ್ಟರೆ, ಉಳಿದ ಪ್ರಕರಣದ ರುವಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ.
ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರು ಈಜಿಪ್ಟ್ ದೇಶದ ಶರ್ಮ್-ಅಲ್-ಶೇಕ್ ನಗರದಲ್ಲಿ, ಭಯೋತ್ಪಾದಕರ ವಿರುದ್ಧದ ಸಮರದಲ್ಲಿ ಶೂನ್ಯ ಸಹನೆಯೆಂಬ ನೀತಿಗೆ ತಿಲಾಂಜಲಿ ನೀಡಿದಾಗಲೇ, 2008ರ ಮುಂಬೈ ಧಾಳಿ ಹಿನ್ನಲೆಯಲ್ಲಿ, ಭಯೋತ್ಪಾದಕರ ವಿರುದ್ಧ ಭಾರತ ಆರಂಭಿಸಿದ ಸಮರಕ್ಕೆ ಭೀಕರ ಆಘಾತವುಂಟಾಯಿತು. ಶರ್ಮ್-ಅಲ್-ಶೇಕಿನಲ್ಲಿ ಯುಪಿಎ ಸರ್ಕಾರ ಪಾಕಿಸ್ತಾನದ ಮುಂದೆ ಮಂಡಿವೂರುತ್ತಾ, ಭಾರತದಂತೆ ಪಾಕಿಸ್ತಾನವೂ ಭಯೋತ್ಪಾದನೆಯ ಬೇಗುದಿಯನ್ನು ಎದುರಿಸುತ್ತಿದೆ ಎಂಬ ವಾದಕ್ಕೆ ಮಣೆಹಾಕಿತು.

ಯುಪಿಎ ಸರ್ಕಾರ ಚಾಚಿದ ಮೈತ್ರಿಯ ಹಸ್ತಕ್ಕೆ ಪಾಕಿಸ್ತಾನದ ಕಡೆಯಿಂದ ಯಾವುದೇ ಅಪೇಕ್ಷಿತ ಪ್ರತಿಫಲ ದೊರೆಯದೆ, ಮೆದು ರಾಷ್ಟ್ರವೆಂಬ ಹಣೆಪಟ್ಟಿಯನ್ನು ಭಾರತ ಪಡೆಯುವಂತಾಯಿತು. ಭಯೋತ್ಪಾದಕರ ವಿರುದ್ಧ ನಿರ್ದಾಕ್ಷಿಣ್ಯ ನಿಲವು ತೆಗೆದುಕೊಳ್ಳದ ಹೊರತು, ನಮ್ಮ ನಗರಗಳು, ರೈಲುಗಳು, ಬಸ್ಸುಗಳು ಮತ್ತು ಅನ್ಯ ಪ್ರಮುಖ ಸಂಘಟನೆಗಳ ಮೇಲೆ ನಡೆಯುವ ಭಯೋತ್ಪಾದನಾ ಧಾಳಿಗಳು ಅವ್ಯಾಹತವಾಗಿ ಮುಂದುವರೆಯಲಿವೆ.

ಭಯೋತ್ಪಾದನೆಯು ಮಾನವತೆಯ ವಿರುದ್ಧ ನಡೆಯುವ ಅತಿ ಅಮಾನುಷ ಕೃತ್ಯ. ನೀತಿ ಸಿದ್ಧಾಂತ, ಧರ್ಮ ಅಥವಾ ಯಾವುದೇ ವ್ಯವಸ್ಥೆ ವಿರುದ್ಧದ ಹೋರಾಟ ಎಂದು ಭಯೋತ್ಪಾದನೆಯನ್ನು ಪರಿಗಣಿಸಲು ಸಾಧ್ಯವಿಲ್ಲ, ಅದನ್ನು ಸಮರ್ಥಿಸಲೂ ಸಹ ಸಾಧ್ಯವಿಲ್ಲ.

ಕೇಂದ್ರ ಗೃಹ ಸಚಿವರಾದ ಶ್ರೀ ಸುಶೀಲ್ ಕುಮಾರ್ ಶಿಂದೆ ಅವರು ನೀಡಿದ ಹೇಳಿಕೆ ವಿವೇಕವಿಲ್ಲದ ಮಾತಲ್ಲ. ಭಯೋತ್ಪಾದನೆಗೆ ಕೋಮುವಾದದ ಬಣ್ಣ ಹಚ್ಚುತ್ತಾ, ಪ್ರಜ್ಞಾಪೂರ್ವಕ ವೋಟ್ ಬ್ಯಾಂಕ್ ರಾಜಕಾರಣವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಗೃಹ ಸಚಿವರು ಸಂಸತ್ ಅಧಿವೇಶನ ಹಾಳಾಗದೇ ಇರುವ ಉದ್ದೇಶದಿಂದ ತಮ್ಮ ಹೇಳಿಕೆಗೆ ಕ್ಷಮೆಯಾಚಿಸಿದ್ದರೂ, ಕಾಂಗ್ರೆಸ್ ಪಕ್ಷ ಕೋಮುವಾದದ ಬಣ್ಣ ಹಚ್ಚುವ ನೀತಿ ಅನುಸರಿಸುವುದು ದಿಟ. ಬಾತ್ಲ ಹೌಸ್ ಧಾಳಿ ಇರಬಹುದು ಅಥವಾ 26/11ರ ಮುಂಬೈ ಧಾಳಿಯಿರಬಹುದು, ಅವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪಿತೂರಿ ಎಂಬುದಾಗಿ ಬರೆದ ನಿರಾಧಾರ ಪುಸ್ತಕವಿರಬಹುದು, **ಕಾಂಗ್ರೆಸ್ ಪಕ್ಷದ ನಾಯಕರು ಸದಾ ರಾಷ್ಟ್ರೀಯ ಹಿತದ ಬೆಲೆ ತೆತ್ತಾದರು**

**ಸರಿ, ವೋಟ್ ಬ್ಯಾಂಕ್ ರಾಜಕಾರಣ ನಿಲ್ಲಿಸುವುದಿಲ್ಲ. ಭಾರತದ ಗಡಿಯೊಳಗೆ ಪಾಕಿಸ್ತಾನದ ಸೇನೆಯ ನೀಚ ಕೃತ್ಯದಿಂದ ಶಿರಚ್ಛೇದನಕ್ಕೆ ಒಳಗಾಗಿ ದೇಶಕ್ಕಾಗಿ ಜೀವತೆತ್ತ ನಮ್ಮ ಸೈನಿಕರ ಹಳ್ಳಿಗೆ ಭೇಟಿ ನೀಡಲು ಸಮಯವಿಲ್ಲದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ಉತ್ತರ ಪ್ರದೇಶದ ಅಜ್‌ಘಡ್‌ನಲ್ಲಿ ಭಯೋತ್ಪಾದಕ ಕೃತ್ಯದಲ್ಲಿ ಅಪರಾಧಿಯೆಂದು ಸಾಬೀತಾದ ವ್ಯಕ್ತಿಯ ಮನೆಗೆ ತೆರಳಿ ಅಶ್ರುತರ್ಪಣ ಸುರಿಸುವ ಉದಾತ್ತ ಕಾರ್ಯಕ್ಕಾಗಿ ಸಮಯ ಹೊಂದಿದ್ದಾರೆ**. ನಾನು, ಸುಶ್ಮಾಅವರು ಹಾಗೂ ನಿತಿನ್‌ಅವರು ಸೈನಿಕರ ಹಳ್ಳಿಗೆ ಭೇಟಿ ನೀಡಿ ಅವರ ಶೋಕದಲ್ಲಿ ಭಾಗಿಯಾಗಿದ್ದೆವು.

ಹಿಂದು ಆತಂಕವಾದದ ವಿವಾದ ಹುಟ್ಟಿಸಿ, ಆತಂಕವಾದದ ನಮ್ಮ ಸಮರದ ಶಕ್ತಿ ಕುಂದಿಸುವ ಕೆಲಸವನ್ನು ಯುಪಿಎ ಸರ್ಕಾರ ಮಾಡುತ್ತಿದೆ. ಇದೇ ಯುಪಿಎ ಸರ್ಕಾರ ಸಮಜೋತಾ ಎಕ್ಸಪ್ರೆಸ್ ಸ್ಫೋಟದ ಪ್ರಕರಣದಲ್ಲಿ ಲಷ್ಕರ್ ವಿರುದ್ಧ ವಿಸ್ತೃತ ವರದಿ ನೀಡಿದ್ದು, ಅದರ ಆಧಾರದ ಮೇಲೆ ಅಮೇರಿಕ ಲಷ್ಕರ್ ಸಂಘಟನೆಯನ್ನು ನಿಷೇಧಿಸಿತ್ತು. ಆದರೆ ನಂತರ ಹಲವಾರು ರಾಜಕೀಯ ಕಾರಣಗಳಿಗಾಗಿ, ತನ್ನ ನಿಲುವನ್ನು ತಕ್ಷಣ ಬದಲಾಯಿಸಿದ ಯುಪಿಎ ಸರ್ಕಾರ ಹಲವಾರು ಪ್ರಮುಖ ಸತ್ಯಾಂಶಗಳನ್ನು ಕಡೆಗಣಿಸಿ 'ಕೇಸರಿ ಭಯೋತ್ಪಾದನೆಯ' ಕಟ್ಟು ಕಥೆಯನ್ನು ಹೆಣೆದಿದೆ. **ಭಯೋತ್ಪಾದನೆಗೆ ಯಾವುದೇ ಒಂದು ಧರ್ಮದ ಬಣ್ಣ ಹಚ್ಚುವ ಪ್ರಯತ್ನಕ್ಕೆ ಭಾಜಪ ಸಂಪೂರ್ಣ ವಿರೋಧ ವ್ಯಕ್ತಪಡಿಸುತ್ತದೆ.**

ಆರ್‌ಎಸ್‌ಎಸ್–ಭಾಜಪ ನಡೆಸುವ ಶಿಬಿರಗಳಲ್ಲಿ ಭಯೋತ್ಪಾದಕರ ತರಬೇತಿ ನಡೆಯುತ್ತಿದೆ ಎಂಬ ಹೇಳಿಕೆಯನ್ನು ಗೃಹ ಸಚಿವರು ನೀಡಿದ ಪರಿಣಾಮ ಲಷ್ಕರ್ ಮುಖ್ಯಸ್ಥ ಹಫೀಜ್ ಸೈಯೀದ್ ಪಾಕಿಸ್ತಾನದಲ್ಲಿ ಸಂತೋಷವಾಗಿ ಓಡಾಡುತ್ತಾ ಭಾರತವನ್ನು ಉಗ್ರವಾದದ ರಾಷ್ಟ್ರ ಎಂದು ಘೋಷಿಸಬೇಕು ಎಂಬ ಪ್ರಚಾರ ಆರಂಭಿಸಿದ್ದಾನೆ. ಯುಪಿಎ ಸರ್ಕಾರ ಮಾಡಿದ ಈ ಒಂದು ತಪ್ಪಿನಿಂದ ಭಾರತ ಭಾರಿ ಬೆಲೆ ತೆರುವಂತಾಗಿದೆ. ತಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ, ಯುಪಿಎ ಸರ್ಕಾರ ನೀಡಿದ ಹೇಳಿಕೆಯಿಂದ, ಭಾರತವನ್ನು ಭಯೋತ್ಪಾದನೆ ವಿಚಾರದಲ್ಲಿ ದೂಷಿಸುವ ಅವಕಾಶವನ್ನು ಪಾಕಿಸ್ತಾನಕ್ಕೆ ನೀಡಿದಂತಾಗಿದೆ. ತತ್ವಸಿದ್ಧಾಂತದ ಆಧಾರದ ಮೇಲಾಗಲಿ ಅಥವಾ ಮನಃಪೂರ್ವಕವಾಗಿ ಭಯೋತ್ಪಾದನೆ ವಿರುದ್ಧ ನಿರ್ಣಾಯಕ ಸಮರ ಸಾರುವ ಇಂಗಿತವನ್ನಾಗಲಿ ಕಾಂಗ್ರೆಸ್ ಪಕ್ಷ ಹೊಂದಿಲ್ಲ. ಈಶಾನ್ಯ ಪ್ರಾಂತ್ಯದಲ್ಲಿ ಅಕ್ರಮ ನುಸುಳುವಿಕೆಯಿಂದ ಆಂತರಿಕ ಭದ್ರತೆಗೆ ಮತ್ತೊಂದು ದೊಡ್ಡ ಸವಾಲು ಎದುರಾಗಿದೆ.

ಬಾಂಗ್ಲಾದೇಶದಿಂದ ಉಂಟಾಗಿರುವ ಅಕ್ರಮ ವಲಸೆಯಿಂದ ಈಶಾನ್ಯ ರಾಜ್ಯಗಳ ಭೌಗೋಳಿಕ ಸ್ವರೂಪ ಬದಲಾಗುತ್ತಿದ್ದು, ಆರ್ಥಿಕ ಹಾಗೂ ನೈಸರ್ಗಿಕ ಸಂಪನ್ಮೂಲಗಳಿಗಾಗಿ ಸ್ಥಳೀಯ ಭಾರತೀಯ ನಾಗರಿಕರ(ಅವರಲ್ಲಿ ಹಿಂದುಗಳು ಹಾಗೂ ಮುಸಲ್ಮಾನರು ಸೇರಿದ್ದಾರೆ) ವಿರುದ್ಧ ಹಿಂಸಾಚಾರಕ್ಕೆ ತಿರುಗಿದ್ದಾರೆ. ಐಎಂಡಿಟಿ ಕಾಯಿದೆಯ ಕುರಿತು ತಮ್ಮ ತೀರ್ಪು ನೀಡಿದ ಸರ್ವೋಚ್ಚ ನ್ಯಾಯಾಲಯ, ಭಾರತದ ವಿರುದ್ಧ ವಿದೇಶಿ ಆಕ್ರಮಣಕ್ಕೆ ಸಮನಾದ ವರ್ತನೆ ಎಂದು ಅಭಿಪ್ರಾಯ ನೀಡಿತ್ತು. ಅಕ್ರಮ ನುಸುಳುವಿಕೆಯನ್ನು ಗುರುತಿಸಿ ಅಂಥವರನ್ನು ದೇಶದ ಹೊರಗೆ ಕಳಿಸುವ ಸಮಯಬದ್ಧ ಕಾರ್ಯಕ್ರಮ ನಡೆಯಬೇಕಿದೆ. ಈಶಾನ್ಯ ಪ್ರಾಂತ್ಯದಲ್ಲಿ ರಾಷ್ಟ್ರೀಯ ನಾಗರಿಕರ ನೊಂದಣಿ ಕಾರ್ಯ ಆರಂಭವಾಗಬೇಕು. ಈಶಾನ್ಯ ಪ್ರಾಂತ್ಯವು ಹಲವು ವಿದೇಶಿ ರಾಷ್ಟ್ರಗಳೊಂದಿಗೆ ಗಡಿ ಹೊಂದಿದೆ, ಆದ್ದರಿಂದ ಅಲ್ಲಿರುವ ಅಂತಾರಾಷ್ಟ್ರೀಯ ಗಡಿಯ ನಿರ್ವಹಣೆ ಮುತುವರ್ಜಿಯಿಂದ ನಡೆಯಬೇಕಿದೆ.

ಅಸ್ಸಾಂ ಗಲಭೆಯ ನಂತರವೂ ಯುಪಿಎ ಸರ್ಕಾರ ತಕ್ಕ ಪಾಠ ಕಲಿತಂತಿಲ್ಲ. ಪಶ್ಚಿಮ ಬಂಗಾಳದ 24 ಪರಗಣ ಜಿಲ್ಲೆಯಲ್ಲೂ ಹಿಂಸಾಚಾರ ನಡೆಯುತ್ತಿವೆ. ಬೇರೆ ಅನ್ಯ ರಾಜ್ಯಗಳಲ್ಲೂ ಭಾರತೀಯರು ಹಾಗೂ ಭಾರತದವರಲ್ಲದೆ ಇರುವವರ ನಡುವೆ ಒಂದಲ್ಲಾ ಒಂದು ಕಾರಣಕ್ಕೆ ಗಲಭೆ ಹಿಂಸಾಚಾರ ನಡೆಯುತ್ತಿದೆ. ಈ ವಿಚಾರದಲ್ಲಿ ಯುಪಿಎ ಸರ್ಕಾರ ಮಧ್ಯಸ್ಥಿಕೆವಹಿಸಿ ಅಕ್ರಮ ನುಸುಳುವಿಕೆಯನ್ನು ತಡೆಯದೇ ಇದ್ದರೆ ಇಡೀ ಈಶಾನ್ಯ ಪ್ರಾಂತ್ಯ ಭುಗಿಲೆದ್ದು ಬೂದಿಯಾಗಲಿದೆ.

ಭಾರತದ ಭದ್ರತೆ ದೃಷ್ಟಿಯಿಂದ ಬಾಂಗ್ಲಾದೇಶಿಗಳ ನುಳುವಿಕೆ ಬಹು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. **ಭದ್ರತಾ ವ್ಯವಸ್ಥೆಯ ಸುಧಾರೀಕರಣ ಕುರಿತು ಸಚಿವರ ಸಮೂಹದ ವರದಿ(2001)** ಅಂದಾಜಿನಂತೆ ಭಾರತದ ಒಳಗೆ ಒಂದುವರೆ ಕೋಟಿ ಬಾಂಗ್ಲಾದೇಶಿಗಳು ಅಕ್ರಮವಾಗಿ ನುಸುಳಿದ್ದಾರೆ. ಈಗ 12 ವರ್ಷಗಳ ನಂತರ ಇವರ ಬೆಳೆಯುತ್ತಿರುವ ಸಂಖ್ಯೆಯನ್ನು ನೀವೇ ಅಂದಾಜು ಮಾಡಿಕೊಳ್ಳಬಹುದು. ಕಳೆದ ಕೆಲವು ತಿಂಗಳಿಂದ ಅಸ್ಸಾಂನಲ್ಲಿ ನಡೆದ ಹಿಂಸಾಚಾರದಿಂದ ಭಾರತೀಯ ಆಂತರಿಕ ಭದ್ರತೆಯ ಮೇಲೆ ಸಂಭವಿಸಿರುವ ಸವಾಲಿನ ಅಗಾಧತೆಯ ಅಳತೆ ಮಾಡಬಹುದು. ಅಸ್ಸಾಂ ಅಲ್ಲದೆ, ತ್ರಿಪುರ, ಮೇಘಾಲಯ ಹಾಗೂ ಅರುಣಾಚಲ ಪ್ರದೇಶಗಳಿಗೂ ಬಾಂಗ್ಲಾದೇಶಿಗಳು ಹರಡುತ್ತಿದ್ದಾರೆ.

ಭಯೋತ್ಪಾದನೆಯಂತೆ ನಕ್ಸಲ್ ಚಟುವಟಿಕೆಯು ಆಂತರಿಕ ಭದ್ರತೆಗೆ ಅತಿ ದೊಡ್ಡ ಬೆದರಿಕೆ ನೀಡಿದೆ. ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ಅನುಸಾರವೂ ನಕ್ಸಲವಾದವು ದೇಶದ ಆಂತರಿಕ ಭದ್ರತೆ ದೃಷ್ಟಿಯಿಂದ ಬಹು ದೊಡ್ಡ ಬೆದರಿಕೆಯಾಗಿದೆ. ಆದರೂ ಸಹ ನಕ್ಷಲೀಯರ ಪ್ರಭಾವದ ವ್ಯಾಪ್ತಿ ಕ್ಷೀಣಿಸುತ್ತಿಲ್ಲ ಹಾಗೂ ನಮ್ಮ ಭದ್ರತಾ ಪಡೆಗಳು ನಕ್ಸಲ್ ಧಾಳಿಗೆ ಪ್ರತಿನಿತ್ಯ ಪ್ರಾಣ ತೆತ್ತುತ್ತಿವೆ.
ಸುಮಾರು 250 ಜಿಲ್ಲೆಗಳು ಅಂದರೆ ದೇಶದ ಅರ್ಧದಷ್ಟು ಭಾಗ ನಕ್ಸಲ್ ಬೆದರಿಕೆಗೆ ಒಳಪಟ್ಟಿವೆ. ಯುಪಿಎ ಸರ್ಕಾರ ತನ್ನ ಕೋಢಿಕೃತ ಕಾರ್ಯ ಯೋಜನೆ ಅನ್ವಯ ಕೇವಲ 78 ಜಿಲ್ಲೆಗಳನ್ನು ನಕ್ಸಲ್ ಪ್ರಭಾವಿತ ಜಿಲ್ಲೆಗಳು ಎಂದು ಘೋಷಿಸಿದೆ. ಈ ಕಾರ್ಯ ಯೋಜನೆಯನ್ನು ಎಲ್ಲಾ ನಕ್ಸಲ್ ಪ್ರಭಾವಿತ ಜಿಲ್ಲೆಗಳಿಗೆ ವಿಸ್ತರಿಸುವ ತ್ವರಿತ ಅಗತ್ಯವಿದೆ.

ನಕ್ಸಲ್‌ರ ಸಮಸ್ಯೆ ಬಗೆಹರಿಸಲು ಕ್ರೋಢಿಕೃತ ನೀತಿಯ ಅಗತ್ಯವಿದ್ದು, ಭದ್ರತಾ ಪಡೆಗಳ ನಕ್ಸಲ್ ವಿರೋಧಿ ಗತಿವಿಧಿ ಅಲ್ಲದೆ ಈ ಪ್ರದೇಶಗಳಲ್ಲಿ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳ ಸಮಸ್ಯೆಗಳನ್ನು ನಿವಾರಿಸುವ ಅಗತ್ಯವಿದೆ. ಇದರೊಂದಿಗೆ ಭೌತಿಕವಾಗಿ ಕೆಲವು ಬುದ್ಧಿಜೀವಿಗಳು ತೀವ್ರಗಾಮಿ ಪಂಥದ ನಕ್ಸಲ್‌ರಿಗೆ ಭೌದ್ಧಿಕ ಬೆಂಬಲ ನೀಡುವ ಯತ್ನಗಳಿಗೆ ಕಡಿವಾಣ ಹಾಕುವ ಅಗತ್ಯವಿದೆ.

ಆಂತರಿಕ ಭದ್ರತಾ ದೃಷ್ಟಿಯಿಂದ ಎದುರಾದ ಮತ್ತೊಂದು ವಿಚಾರವೆಂದರೆ, ಆತಂಕವಾದಿ ಸಮೂಹಗಳು ಹಣ ಮಾಡಿಕೊಳ್ಳುವ ಮಾರ್ಗವೆಂದರೆ ಅದು ಮಾದಕದ್ರವ್ಯಗಳ ಕಳ್ಳಸಾಗಣೆ. 2011ರಲ್ಲಿ ರಾಷ್ಟ್ರೀಯ ಅಪರಾಧ ಮಂಡಳಿ ಮಾಡಿದ ಅಂದಾಜಿನಂತೆ 2004ರಲ್ಲಿ ಭಾರತವು ೨೮ ಲಕ್ಷ ಮಾದಕ ವಸ್ತುಗಳ ವ್ಯಸನಿಗಳನ್ನು ಹೊಂದಿತ್ತು. ಇವರಲ್ಲಿ ಹಲವರು 15ರಿಂದ 35 ವಯೋಮಾನದವರಾಗಿದ್ದಾರೆ. ಇಷ್ಟು ಭಾರಿ ಸಂಖ್ಯೆಯಲ್ಲಿ ಯುವಕರು ಮಾದಕ ವಸ್ತುಗಳ ಚಟಕ್ಕೆ ಬಲಿಯಾದರೆ, ಮುಂದಿನ ದಿವಸಗಳಲ್ಲಿ ಕಾನೂನು ಸುವ್ಯವಷ್ಥೆ ಹದಗೆಡುವ ಸಾಧ್ಯತೆಗಳಿವೆ.

ಆಂತರಿಕ ಸುರಕ್ಷತೆಗೆ ಎದುರಾದ ಮತ್ತೊಂದು ಹೊಸ ಸವಾಲೆಂದರೆ, ದೇಶದಲ್ಲಿ ವ್ಯಾಪಕ ಚಲಾವಣೆಯಲ್ಲಿರುವ ನಕಲಿ ರೂಪಾಯಿ ನೋಟುಗಳು. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಸಮಸ್ಯೆ ಗಂಭೀರ ಸ್ವರೂಪ ಪಡೆದಿದ್ದು, 2006ರ ಈಚೆಗೆ ಈ ಸಮಸ್ಯೆ ಉಲ್ಬಣಿಸಿದೆ. ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್ಐಎ) ಅನುಸಾರ, ದೇಶದಲ್ಲಿ ಸುಮಾರು 16 ಸಾವಿರ ಕೋಟಿ ನಕಲಿ ರೂಪಾಯಿ ನೋಟುಗಳು ಚಲಾವಣೆಯಲ್ಲಿವೆ. ಇದು ದೇಶದ ಆರ್ಥಿಕ ವ್ಯವಸ್ಥೆಗೆ ಬಹು ದೊಡ್ಡ ಧಕ್ಕೆ ನೀಡಲಿದೆ.

ಆಂತರಿಕ ಭದ್ರತೆ ದೃಷ್ಟಿಯಿಂದ, ಜನಸಾಮಾನ್ಯರು ಗಂಭೀರವಾಗಿ ಪರಿಗಣಿಸದ, ಮತ್ತೊಂದು ವಿಚಾರವೆಂದರೆ ಅದು ಅಂತರ್ಜಾಲ ಅಥವಾ ಸೈಬರ್ ಭಯೋತ್ಪಾದನೆ. ಭಾರತದ ಆಂತರಿಕ ಭದ್ರತೆಗೆ ಆಘಾತ ನೀಡಬಲ್ಲ ಹಾಗೂ ಮುಂದಿನ ಪೀಳಿಗೆಯ ಬೆದರಿಕೆ ಎಂದು ಕರೆಸಿಕೊಳ್ಳುವ ಈ ಬೆದರಿಕೆ ಭಾರತದ ಭವಿಷ್ಯದ ದೃಷ್ಟಿಯಿಂದ ಬಹು ದೊಡ್ಡ ಸವಾಲು ಒಡ್ಡಿದೆ. ಒಂದು ಅಂದಾಜಿನ ಅನುಸಾರ, ಅಂತರ್ಜಾಲ ಭಯೋತ್ಪಾದನೆ ದೃಷ್ಟಿಯಿಂದ ಭಾರತವು ಐದು ಪ್ರಮುಖ ದೇಶಗಳಲ್ಲಿ ಒಂದಾಗಿದೆ. ಈ ಸಮಸ್ಯೆ ಬೆಳೆಯುತ್ತಿರುವ ವೇಗವನ್ನು ಗಮನಿಸಬೇಕಾದರೆ, 2004ರಲ್ಲಿ ನಡೆದ ಘಟನೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. **ಆಗ ಅಂತರ್ಜಾಲ ಧಾಳಿಯ 23 ಪ್ರಕರಣಗಳು ನಡೆದವು, 2011ರಲ್ಲಿ ಈ ಪ್ರಮಾಣ ಗಣನೀಯವಾಗಿ 13,301ಕ್ಕೆ ಏರಿತು**.

ಭಾರತದಲ್ಲಿ ಪ್ರಮುಖ ವಲಯಗಳಾದ ದೂರಸಂಪರ್ಕ, ರೈಲು, ವಾಯುಯಾನ, ಸ್ಟಾಕ್ ಎಕ್ಸ್‌ಚೇಂಜ್ ಹಾಗೂ ಮಿಲಿಟರಿ ನೆಲೆಗಳು ಇಂತಹ ಧಾಳಿಗೆ ಆಯ್ದ ಟಾರ್ಗೆಟ್‌ಗಳಾಗಿವೆ.

ಉದಾಹರಣೆಗೆ, ಸೈಬರ್ ಅಪರಾಧದಿಂದ ದೇಶದ ಶಾಂತಿ ಕದಡುವ ಪ್ರಯತ್ನ ಕಳೆದ ವರ್ಷನಡೆಯಿತು. ಅಂತರ್ಜಾಲದಲ್ಲಿ ಅನಗತ್ಯ ಭೀತಿ ಹುಟ್ಟಿಸಿ ಅಲ್ಪಸಂಖ್ಯಾತ ಸಮುದಾಯವನ್ನು ಪ್ರಚೋದಿಸುವ ಪ್ರಯತ್ನ ನಡೆದ ಕಾರಣ ದೇಶದೆಲ್ಲೆಡೆ ದಂಗೆಗಳಾದವು. ಸೈಬರ್ ಆಕ್ರಮಣದ ಮೂಲಕ ಆಂತರಿಕ ಭದ್ರತೆಗೆ ಧಕ್ಕೆ ತರುವ ಜ್ವಲಂತ ಉದಾಹರಣೆಯಿದಾಗಿದೆ.

**ಎನ್‌ಸಿಟಿಸಿ ವಿಚಾರ**

ಹೈದರಾಬಾದ್ ಪ್ರಕರಣದ ನಂತರ ಕೇಂದ್ರ ಸರ್ಕಾರ ಎನ್‌ಸಿಟಿಸಿ(ರಷ್ಟ್ರೀಯ ಭಯೋತ್ಪಾದನೆ ನಿಗ್ರಹ ಕೇಂದ್ರ) ಕುರಿತು ತೆಗೆದುಕೊಂಡ ಉಪಕ್ರಮವನ್ನು ಪ್ರಾಮಾಣಿಕವಾಗಿ ಮುಂದುವರಿಸಬೇಕು. ಭಾರತದ ಒಕ್ಕೂಟ ವ್ಯವಸ್ಥೆಗೆ ಇದರಿಂದ ಧಕ್ಕೆಯಾಗದ ರೀತಿ ಈ ಕೇಂದ್ರ ಕಾರ್ಯವಹಿಸಬೇಕು. ಆತಂಕವಾದ ಕುರಿತಂತೆ ಪ್ರಾಮಾಣಿಕ ಕಾರ್ಯತಂತ್ರ ರೂಪಿಸುವ ವಿಚಾರದಲ್ಲಿ ಈ ಸರ್ಕಾರದ ಹಿಂದಿನ ದಾಖಲೆ ಅಷ್ಟೇನು ಉತ್ತಮವಾಗಿಲ್ಲ. ಸಮಸ್ಯೆ ಅಗಾಧ ಸ್ವರೂಪ ಪಡೆದಿದ್ದರೂ, ಗುಜರಾತ್ ಹಾಗೂ ಮಧ್ಯ ಪ್ರದೇಶ ಸರ್ಕಾರಗಳು ಪ್ರಸ್ತಾಪಿಸಿದ ಭಯೋತ್ಪಾದನಾ ನಿಗ್ರಹ ಮಸೂದೆಗಳನ್ನು ಕೇಂದ್ರ ಸರ್ಕಾರ ನೆನೆಗುದಿಗೆ ಇರಿಸಿದೆ. **ಎನ್‌ಸಿಟಿಸಿ ಸಂಸ್ಥೆಯನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ಆರಂಭಿಸುವ ಇಂಗಿತವಿರುವ ಸರ್ಕಾರಕ್ಕೆ ಭಯೋತ್ಪಾದನೆ ವಿಚಾರದಲ್ಲಿ ಅತ್ಯಂತ ನಿಷ್ಠೆಯನ್ನು ಹೊಂದಿದ್ದರೆ, ರಾಷ್ಟ್ರಮಟ್ಟದಲ್ಲಿ ಭಯೋತ್ಪಾದನೆ ನಿಗ್ರಹ ಕಾನೂನನ್ನು ತರುವ ಪ್ರಯತ್ನ ಮಾಡದೇಯಿರಲು ಕಾರಣವೇನು? ಭಯೋತ್ಪಾದನೆಗೆ ತುತ್ತಾಗಿರುವ ಎಲ್ಲಾ ರಾಷ್ಟ್ರಗಳ ಪೈಕಿ ಭಯೋತ್ಪಾದನಾ ವಿರೋಧಿ ಕಾನೂನನ್ನು ಹೊಂದಿರದ ಏಕೈಕ ರಾಷ್ಟ್ರವೆಂದರೆ ಅದು ಭಾರತ**. ಎನ್‌ಸಿಟಿಸಿ ಕುರಿತ ನಮ್ಮ ವಿಸ್ತೃತ ಅನಿಸಿಕೆಗಳನ್ನು ಈಗಾಗಲೆ ಸಂಸತ್ತಿನಲ್ಲಿ ತಿಳಿಸಿದ್ದೇವೆ.

**ವಿದೇಶಾಂಗ ಭದ್ರತೆ**

ಕೇವಲ ಆಂತರಿಕ ಭದ್ರತೆಯಲ್ಲದೆ, ವಿದೇಶಾಂಗ ಭದ್ರತೆ ವಿಚಾರದಲ್ಲೂ ಹಲವಾರು ಲೋಪದೋಷಗಳು ಕಂಡುಬಂದಿವೆ. ರಕ್ಷಣಾ ವಲಯದಲ್ಲಿ ಒಂದರ ನಂತರ ಮತ್ತೊಂದು ಹೀಗೆ ಹಲವಾರು ಹಗರಣಗಳು ನಡೆದ ಪರಿಣಾಮ, ನಮ್ಮ ಸಶಸ್ತ್ರಪಡೆಗಳಿಗೆ ಉಪಯುಕ್ತ ಶಸ್ತ್ರಾಸ್ತ್ರ ಪೂರೈಸುವಲ್ಲಿ ವಿಳಂಬವಾಗಿದ್ದು, ವಿದೇಶಿ ನೆಲೆಯಿಂದ ಉಂಟಾಗಬಹುದಾದ ಬೆದರಿಕೆಗಳನ್ನು ತಡೆಯಲು ಉಪಯುಕ್ತ ಸಿದ್ಧತೆಯಾಗಿಲ್ಲ. ಸೇನೆಗೆ ಅಗತ್ಯ ಸಲಕರಣೆಗಳು ಮತ್ತು ಮದ್ದು ಗುಂಡುಗಳ ಕುರಿತು ಮಾಜಿ ಸೇನಾ ಪ್ರಮುಖ ಸರ್ಕಾರದ ಗಮನ ಸೆಳೆಯುವ ಯತ್ನ ಮಾಡಿದ್ದರು. ವಾಯು ಪಡೆಯಲ್ಲಿ ಹಲವಾರು ಉಪಕರಣಗಳು ಹಳೆಯದಾಗಿದ್ದು, ತಾಂತ್ರಿಕ ಸುಸಜ್ಜತೆ ಕಾಣ್ಮರೆಯಾಗಿದೆ. ಈ ಎಲ್ಲಾ ವಿಚಾರಗಳತ್ತ ಗಮನ ಹರಿಸಬೇಕಾದ ಸರ್ಕಾರ ರಕ್ಷಣಾ ಇಲಾಖೆಯ ಅನುದಾನವನ್ನು ಕಡಿತಗೊಳಿಸಿದೆ. ಆಂತರಿಕ ಹಾಗೂ ವಿದೇಶಿ ಭದ್ರತಾ ದೃಷ್ಟಿಯಿಂದ ಭಾರತ ಅತಿ ಸೂಕ್ಷ್ಮ ಪರಿಸ್ಥಿತಿಯನ್ನು ಎದುರಿಸುತ್ತಿದೆ.

**ನೆರೆರಾಷ್ಟ್ರಗಳು**

ಭಾರತದ ಪರಿಸ್ಥಿತಿ ಎಲ್ಲರಿಗಿಂತ ಭಿನ್ನವಾಗಿದ್ದು, ಸವಾಲುಗಳಿಂದ ತುಂಬಿದೆ. ನೇರ ಮಾತುಗಳಲ್ಲಿ ಹೇಳುವುದಾದರೆ, ವಿಶ್ವದ ಬೃಹತ್ ಭಯೋತ್ಪಾದನಾ ತಾಣ ನಮ್ಮ ಪಕ್ಕದಲ್ಲೇ ಅಂದರೆ ಪಾಕಿಸ್ತಾನದಲ್ಲಿ ಇದ್ದು, ಆ ದೇಶದೊಂದಿಗೆ ಹಿಂದಿನಿಂದಲೂ ನಮ್ಮ ಸಂಬಂಧ ಅಷ್ಟೇನೂ ಉತ್ತಮವಾಗಿಲ್ಲ. ಭವಿಷ್ಯದಲ್ಲೂ ಈ ಸಂಬಂಧ ಮತ್ತಷ್ಟು ಕೆಡುವ ಸೂಚನೆಗಳಿವೆ. ಅಮೇರಿಕ ಹಾಗೂ ನ್ಯಾಟೊ ಸೇನಾ ಪಡೆಗಳು 2014ರಲ್ಲಿ ಅಫಘಾನಿಸ್ಥಾನ ತೊರೆದು ತೆರಳಿದ ಬಳಿಕ, ಈ ಪ್ರದೇಶದಲ್ಲಿ ಭಾರತ ಗಂಭೀರ ಸ್ವರೂಪದ ಬೆದರಿಕೆಗೆ ಒಳಗಾಗುವ ಸಾಧ್ಯತೆ ಹೆಚ್ಚು.

ಅಮೇರಿಕ ಮತ್ತು ನ್ಯಾಟೊ ಪಡೆಗಳು ಅಫಘಾನಿಸ್ತಾನವನ್ನು ಬಿಟ್ಟನಂತರ, ಅಫಘಾನಿಸ್ತಾನದಲ್ಲಿ ಪಾಕಿಸ್ತಾನ ಮತ್ತು ಉಗ್ರಗಾಮಿ ಸಮೂಹಗಳ ಹಸ್ತಕ್ಷೇಪ ಹೆಚ್ಚಲಿದೆ. ಈ ಒಂದು ಸನ್ನಿವೇಶವನ್ನು ಎದುರಿಸಲು ಕೇಂದ್ರ ಸರ್ಕಾರ ಯಾವುದೇ ಒಂದು ಪ್ರತಿರೋಧಕ ತಂತ್ರಗಾರಿಕೆಯನ್ನು ಹೊಂದಿದೆಯೆ? ಅಫಘಾನಿಸ್ತಾನದೊಂದಿಗೆ ನಮ್ಮ ಸಂಬಂಧ ಕೇವಲ ವಾಣಿಜ್ಯ ವಹಿವಾಟಿಗೆ ಸೀಮಿತವಾಗಲಿದೆಯೇ ಅಥವಾ ಅದಕ್ಕೆ ಯಾವುದೇ ಬಗೆಯ ರಾಜತಾಂತ್ರಿಕ ಅಂಶಗಳು ಸೇರಲಿವಿಯೆ.

ಪಾಕಿಸ್ತಾನ ಕುರಿತ ನಮ್ಮ ನೀತಿ ಎಷ್ಟು ಸಡಿಲವಿದೆ ಎಂದರೆ ಜೌನ್‌ಪುರದಲ್ಲಿ 28 ಜುಲೈ 2006ರಂದು ಸಂಭವಿಸಿದ ರೈಲು ಸ್ಫೋಟದ ಘಟನೆಯಿಂದ ತೆಗೆದುಕೊಂಡು 13 ಮಂದಿ ಪ್ರಾಣ ತೆತ್ತ ಹೈದರಾಬಾದಿನ ಸ್ಫೋಟದ ಘಟನೆಯವರೆಗೂ, ಹಲವಾರು ಭಯೋತ್ಪಾದನಾ ಪ್ರಕರಣಗಳಲ್ಲಿ ನೂರಾರು ಜನರ ಪ್ರಾಣ ಹರಣವಾಗಿದೆ. ಹಲವಾರು ಪ್ರಕರಣಗಳಲ್ಲಿ ಪಾಕಿಸ್ತಾನದ ಕೈವಾಡದ ಕುರಿತು ಸ್ಪಷ್ಟ ಸಾಕ್ಷಿಗಳು ದೊರೆತಿವೆ.

**ನಮ್ಮದು ಎಷ್ಟು ಮೆದು ರಾಷ್ಟ್ರವೆಂದರೆ, ಒಂದು ಡಜನ್ ಪ್ರಕರಣಗಳು ಸಂಭವಿಸಿದರೂ, ಕೇವಲ 26/11ರ ಪ್ರಕರಣದಲ್ಲಿ ಒಬ್ಬ ಅಪರಾಧಿ ಕಸಬ್‌ನನ್ನು ಮಾತ್ರ ಶಿಕ್ಷಿಸಲಾಗಿದೆ. ಉಳಿದ ಪ್ರಕರಣಗಳಲ್ಲಿ ತನಿಖೆ ಈವರೆಗೂ ಯಾವುದೇ ನಿರ್ಣಾಯಕ ಹಂತ ತಲುಪಿಲ್ಲ. ಒಂದೆಂದರೆ, ಸರ್ಕಾರ ಆಗಾಗ ಇದಕ್ಕೆ ಕೇಸರೀಕರಣದ ಬಣ್ಣ ಹಚ್ಚುವ ರಾಜಕೀಯ ಯತ್ನಗಳನ್ನು ಮಾತ್ರ ಮಾಡುತ್ತಿರುತ್ತದೆ.**

**ಭಯೋತ್ಪಾದಕರಿಗೆ ತರಬೇತಿ, ಶಸ್ತ್ರಾಸ್ತ್ರಗಳ ಕಳ್ಳಸಾಗಣೆ, ಮಾದಕವಸ್ತುಗಳ ಕಳ್ಳಸಾಗಣೆ,ನಕಲಿ ನೋಟುಗಳ ಪ್ರಸರಣ ಮತ್ತು ಅಂತರ್ಜಾಲದ ಮೂಲಕ ಕೋಮುವಾದಿ ಪ್ರಚಾರ ಹೀಗೆ ಬಹು ಆಯಾಮದ ಯುದ್ಧವನ್ನು ಪಾಕಿಸ್ತಾನ ಭಾರತದ ವಿರುದ್ಧ ನಡೆಸುತ್ತಿದ್ದು ಇದನ್ನು ಹೈಬ್ರಿಡ್ ಯುದ್ಧ ಎಂದು ನಾಮಕರಣ ಮಾಡಬಹುದು**. ಅಮೇರಿಕದ ಪ್ರಮುಖ ತಂತ್ರಗಾರಿಕಾ ನಿಪುಣ ಫ್ರಾಂಕ್ ಹಾಫ್‌ಮೆನ್ ಎಂಬಾತ ಹೈಬ್ರಿಡ್ ಯುದ್ಧ ಎಂಬ ಪದವನ್ನು ಹುಡುಕಿದ್ದಾರೆ. ಇದೊಂದು ಬಹು ಆಯಾಮದ ಯುದ್ಧವಾಗಿದ್ದು, ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಈ ಪದವು ಭಾರತದ ವಿರುದ್ಧ ಪಾಕಿಸ್ತಾನ ನಡೆಸುತ್ತಿರುವ ಸಂಚಿಗೆ ಸೂಕ್ತವಾಗಿದೆ. ಬೇಸರದ ಸಂಗತಿಯೆಂದರೆ, ಯುಪಿಎ ಸರ್ಕಾರ ಪಾಕಿಸ್ತಾನದೊಂದಿಗೆ ಸಡಿಲ ಮತ್ತು ದುರ್ಬಲ ವಿದೇಶಾಂಗ ನೀತಿಯನ್ನು ಎದುರಿಸುತ್ತಿದೆ. ಈ ಒಂದು ದುರ್ಬಲ ವಿದೇಶಾಂಗ ನೀತಿಯನ್ನು ಶರ್ಮ್–ಅಲ್–ಶೇಕ್‌ಯಿಂದ ಹೈದರಾಬಾದಿನವರೆಗೂ ನೋಡಬಹುದು.

ಮತ್ತೊಂದೆಡೆ, ಭಯೋತ್ಪಾದನೆ ವಿರುದ್ಧ ಅನ್ಯ ದೇಶಗಳು ಸ್ಪಷ್ಟ ಹಾಗೂ ಆಕ್ರಮಣಕಾರಿ ನೀತಿಯನ್ನು ಎದುರಿಸುತ್ತಿವೆ. ಒಂದು ಉದಾಹರಣೆ ನೀಡುವ ಮೂಲಕ ನನ್ನ ವಾದವನ್ನು ಪ್ರತಿಪಾದಿಸಲು ಬಯಸುತ್ತೇನೆ. ಅಮೇರಿಕಾದ ಮೇಲೆ ಪಾಕಿಸ್ತಾನದ ನೆಲೆಯಿಂದ ಆತಂಕದ ಧಾಳಿ ನಡೆದಾಗ, ಅಮೇರಿಕಾದ ಅಧ್ಯಕ್ಷರು ಪಣತೊಟ್ಟು, **"ನಿಮ್ಮನ್ನು ಪತ್ತೆ ಹಚ್ಚಿ ಮುಗಿಸುತ್ತೇವೆ"** ಎಂದು ನುಡಿಯುತ್ತಾರೆ, ಮತ್ತು ನಂತರ ಅದೇ ರೀತಿ ಪಾಕಿಸ್ತಾನದ ಸರ್ಕಾರದ ಮೂಗಿನ ಕೆಳಗೆ ವಾಸವಾಗಿದ್ದ ಒಸಾಮಾ–ಬಿನ್–ಲೇಡನ್‌ನನ್ನು ಪತ್ತೆ ಹಚ್ಚಿ ಮುಗಿಸುತ್ತಾರೆ. ಇಸ್ರೇಲ್ ದೇಶದಲ್ಲಿ ಆತಂಕವಾದದ ಪ್ರಕರಣಗಳು ನಡೆದಾಗ, ಇಸ್ರೇಲ್ ಪ್ರಧಾನ ಮಂತ್ರಿಗಳ ಪ್ರತಿಕ್ರಿಯೆ ಎಂದರೆ, **"ನಿಮ್ಮ ಬೇಟೆ ಆಡುತ್ತೇವೆ ಮತ್ತು ನಿಮ್ಮನ್ನು ಧ್ವಂಸ ಮಾಡುತ್ತೇವೆ"** ಎಂದಾಗಿರುತ್ತದೆ. ಅವರ ಮಾತಿನಂತೆ ಅವರೂ ಸಹ ಭಯೋತ್ಪಾದಕರ ಅಡಗುದಾಣಗಳಿಗೆ ಧಾಳಿ ನೀಡಿ ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ನಿರಂತರವಾದ ಭಯೋತ್ಪಾದನಾ ಧಾಳಿಗಳು ನಡೆಯುತ್ತಿದ್ದರೂ, ನಮ್ಮ ಪ್ರತಿಕ್ರಿಯೆ ಎಂದರೆ, **"ನಿಮ್ಮೊಂದಿಗೆ ಕ್ರಿಕೆಟ್ ಆಟವಾಡುವುದಿಲ್ಲ"** ಎಂದಾಗಿರುತ್ತದೆ. ಇದಕ್ಕಿಂತ ಸಡಿಲವಾದ ಮತ್ತು ದುರ್ಬಲವಾದ ವಿದೇಶಾಂಗ ನೀತಿ ಕಾಣಲು ಸಾಧ್ಯವೇ?

ಚೈನಾದಲ್ಲಿ ಇತ್ತೀಚೆಗೆ ನಡೆಸುತ್ತಿರುವ ಕಾರ್ಯಚಟುವಟಿಕೆಗಳು ಚಿಂತೆಯ ವಿಚಾರಗಳಾಗಿವೆ. ಕರಾಚಿಯ ಸಮೀಪವಿರುವ ಗ್ವದರ್ ಬಂದರಿನಲ್ಲಿರುವ ನೌಕಾ ಕೇಂದ್ರದ ನಿರ್ವಹಣಾ ಜವಾಬ್ದಾರಿಯನ್ನು ಚೈನಾಗೆ ಒಪ್ಪಿಸಲಾಗಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ 11 ಸಾವಿರ ಸೇನಾಪಡೆಯಿರುವ ಮಿಲಿಟರಿ ಶಿಬಿರವನ್ನು ಆರಂಭಿಸಲಾಗಿದೆ. ಚೈನಾ ನಿರಾಕರಿಸಿದರು, ಪಾಕಿಸ್ತಾನ ಹಾಗೂ ಚೀನಾಗಳೆರಡೂ **"ಸರ್ವಋತುಗಳ ಮಿತೃತ್ವ"** ಹೊಂದಿರುವುದಂತೂ ರಾಜತಾಂತ್ರಿಕ ಸತ್ಯವಾಗಿದೆ. ಪಾಕಿಸ್ತಾನವಲ್ಲದೆ ಶ್ರೀಲಂಕಾದ ಹಂಬನ್‌ತೋಟಾದಲ್ಲೂ ಚೀನಾ ನೌಕಾನೆಲೆಯನ್ನು ನಿರ್ಮಿಸುತ್ತಿದೆ. ಮಾಲ್ಡೀವ್ಸ್‌ನಲ್ಲಿಯೂ ಅತಿಯಾದ ವಾಣಿಜ್ಯ ಚಟುವಟಿಕೆಗಳ ಮೂಲಕ ಚೀನಾ ಸಕ್ರಿಯವಾಗಿದ್ದು ಒಂದಲ್ಲಾ ಒಂದು ಕಾರಣದಿಂದ ಭಾರತದ ಮೂರು ದಿಕ್ಕಿನ ಸಮುದ್ರದಲ್ಲೂ ಸಂದೇಹಾಸ್ಪದ ಕಾರ್ಯಾಚರಣೆಯಲ್ಲಿ ತೊಡಗಿದೆ. ಬ್ರಹ್ಮಪುತ್ರ ನದಿಗೆ ಅಣೆಕಟ್ಟು ನಿರ್ಮಿಸುವ ವಿಚಾರವನ್ನು ಚೀನಾ ನಿರಾಕರಿಸಿದರೂ, ಉಪಗ್ರಹ ಚಿತ್ರಗಳು ಅವರ ಹೇಳಿಕೆಯನ್ನು ಸುಳ್ಳುಗೊಳಿಸಿದೆ. ಬಾಂಗ್ಲಾದೇಶಕ್ಕೆ ವ್ಯಾಪಕ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿರುವ ಚೀನಾ ಲಾಸಾಯಿಂದ ಕಟ್ಮಂಡುವಿನವರೆಗು ರಸ್ತೆ ನಿರ್ಮಾಣದಲ್ಲಿ ತೊಡಗಿದೆ. ಭಾರತವನ್ನು ಜಾಗತಿಕವಾಗಿ ಇಕ್ಕಟ್ಟಿನಲ್ಲಿ ಸಿಗಿಸುವ ಪ್ರಯತ್ನವನ್ನು ಚೀನಾ ಮಾಡುತ್ತಿದ್ದರು, ಇದಕ್ಕೆಲ್ಲ ಮೂಕ ಪ್ರೇಕ್ಷಕರಾಗಿ ಯುಪಿಎ ಸರ್ಕಾರ ವರ್ತಿಸುತ್ತಿದೆ.

ಶ್ರೀಲಂಕಾದೊಂದಿಗೆ ನಮ್ಮ ಸಂಬಂಧ ಹದಗೆಟ್ಟಿದೆ. ಭಾರತ ಹಾಗೂ ಶ್ರೀಲಂಕಾ ನಡುವೆ ಇರುವ ಪಾಲ್ಕ್ ಸ್ಟ್ರೇಟ್‌ನಲ್ಲಿ ಶ್ರೀಲಂಕಾ ನೌಕಾಪಡೆಯು ನಮ್ಮ ಮೀನುಗಾರರಿಗೆ ನೀಡುತ್ತಿರುವ ಕಿರುಕುಳ ನಿರಂತರವಾಗಿ ನಡೆಯುತ್ತಿದೆ. ಭಾರತೀಯ ಮೀನುಗಾರರ ಜೀವನ ಹಾಗೂ ನೀವನಾಧಾರವನ್ನು ರಕ್ಷಿಸುವ ಜವಾಬ್ದಾರಿ ಯುಪಿಎ ಸರ್ಕಾರಕ್ಕಿದೆ. ತಮ್ಮ ರಾಜತಾಂತ್ರಿಕ ಮಾರ್ಗಗಳನ್ನು ಬಳಸಿ, ತಮಿಳರ ಪುನರ್ವಸತಿಯನ್ನು ಖಚಿತಪಡಿಸಲು ಸಂವೈಧಾನಿಕ ತಿದ್ದುಪಡಿ ತರುವಂತೆ ಶ್ರೀಲಂಕಾವನ್ನು ಒತ್ತಾಯಿಸಿ ಅಧಿಕಾರ ವ್ಯವಸ್ಥೆಯಲ್ಲಿ ತಮಿಳರಿಗೆ ಪಾಲುನೀಡುವಂತೆ ಶ್ರೀಲಂಕಾ ಭರವಸೆ ನೀಡಿದಂತೆ ನಡೆಯುವಂತೆ ಒತ್ತಡ ತರುವ ಅಗತ್ಯವಿದೆ.

ತೀಸ್ತಾ ನೀರು ಹಂಚಿಕೆ ಒಪ್ಪಂದದಡಿ ಭೂಮಿಯ ವಿನಿಮಯ ಮಾಡಿಕೊಂಡ ಭಾರತ ತನ್ನ 13,000 ಎಕರೆ ಭೂಮಿಯನ್ನು ಕಳೆದುಕೊಳ್ಳುತ್ತಿದ್ದು, ಬಾಂಗ್ಲಾದೇಶ ಮಾತ್ರ ಕೇವಲ 3000 ಎಕರೆ ಭೂಮಿಯನ್ನು ಕಳೆದುಕೊಳ್ಳುತ್ತಿದೆ. 10,000 ಎಕರೆ ಭೂಭಾಗ ನಷ್ಟವನ್ನು ಭರಿಸುವ ಬಗೆಯಾವುದು ಎಂಬುದಕ್ಕೆ ಸರ್ಕಾರದ ಬಳಿ ಸಮಂಜಸವಾದ ಉತ್ತರವಿಲ್ಲ.

ಮಾಲ್ಡೀವ್ಸ್‌ನಲ್ಲಿ ವಿದ್ರೋಹ ಅಥವಾ ನೇಪಾಳದಲ್ಲಿ ಆಂತರಿಕ ಅಸ್ಥಿರತೆ ಕುರಿತಂತೆ ನೆರೆ ರಾಷ್ಟ್ರಗಳನ್ನು ಕುರಿತಂತೆ ಕೇಂದ್ರ ಸರ್ಕಾರ ಗೊತ್ತುಗುರಿ ಇಲ್ಲದ ರಾಜತಾಂತ್ರಿಕ ನೀತಿ ಹಾಗೂ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದೆ.

**ವಿದೇಶಾಂಗ ನೀತಿ**

ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ಹೆಚ್ಚಿನ ಪಾತ್ರ ವಹಿಸಿ ತನ್ನ ಅಸ್ತಿತ್ವದ ಮಹತ್ವವನ್ನು ಮಹಾನ್ ಶಕ್ತಿಯ ರೂಪದಲ್ಲಿ ಸಾರಬೇಕಿದ್ದರೆ, ತನ್ನ ವಿದೇಶಾಂಗ ನೀತಿಯನ್ನು ಸದೃಢಗೊಳಿಸಿ ತಂತ್ರಗಾರಿಕೆ ನೈಪುಣ್ಯತೆಯನ್ನು ಪ್ರದರ್ಶಿಸಬೇಕಾಗಿದೆ. ಪರಮಾಣು ಪರೀಕ್ಷೆ ನಡೆಸಿ ಅಂತಿಮವಾಗಿ ಪರಮಾಣು ಶಕ್ತಿಯುಳ್ಳ ರಾಷ್ಟ್ರ ಎಂಬ ಮಾನ್ಯತೆ ಪಡೆಯುವ ಮೂಲಕ ಇಂತಹ ಒಂದು ಸಮರ್ಥ ವಿದೇಶಾಂಗ ನೀತಿಯನ್ನು ಶ್ರೀ ಅಟಲ್‌ಜಿಯವರ ನಾಯಕತ್ವದಲ್ಲಿ ಎನ್‌ಡಿಎ ಸರ್ಕಾರ ನಿರ್ವಹಿಸಿತ್ತು. ಭಾರತೀಯ ಸಂಸತ್ ಉದ್ದೇಶಿಸಿ ಅಮೀರಿಕ ರಾಷ್ಟ್ರಪತಿ ಒಬಾಮಾ ಮಾಡಿದ ಭಾಷಣದಲ್ಲಿ ಅವರು, ಭಾರತ ಉದಯಿಸುತ್ತಿರುವ ರಾಷ್ಟ್ರವಲ್ಲ ಆದರೆ ಈಗಾಗಲೇ ಉದಯಿಸಿರುವ ರಾಷ್ಟ್ರ ಎಂದಿದ್ದರು. ಆದ್ದರಿಂದ ಸ್ನೇಹಿತರೆ, ರಾಷ್ಟ್ರ ಉದಯಿಸಲು ಆರಂಭವಾಗಿದ್ದು ಪೊಖರನ್ ಪರೀಕ್ಷಣೆಯನ್ನು 13 ಮೇ 1998ರಂದು ಮಾಡಿದಾಗ. ಒಬಾಮಾ ಹೇಳಿಕೆಯು ಎನ್‌ಡಿಎ ಸರ್ಕಾರ ಅನುಸರಿಸಿದ ಪ್ರಬಲ ಹಾಗೂ ಯಶಸ್ವಿ ವಿದೇಶಾಂಗ ನೀತಿಯ ಫಲಶೃತಿಯಾಗಿದೆ.

ಯುಪಿಎ ಸರ್ಕಾರದ ಅವಧಿಯಲ್ಲೂ ಆರ್ಥಿಕ ಪ್ರಗತಿ ದರ ಉತ್ತಮವಾಗಿತ್ತು. ಯುಪಿಎಗೆ ನಾವು ಅಧಿಕಾರ ಹಸ್ತಾಂತರಿಸಿದಾಗ ಜಿಡಿಪಿ ದರ ಶೇಕಡ 8.4 ರಷ್ಟಿತ್ತು. ಆದರೆ ಇಂದು ಅದು ಶೇಕಡ ಐದಕ್ಕೆ ಇಳಿದಿದೆ.

ಇಂದು ಜಾಗತೀಕರಣದ ಯುಗದಲ್ಲಿ ಯಾವುದೇ ದೇಶದ ಶಕ್ತಿಯನ್ನು ಅದರ ಆರ್ಥಿಕ ಶಕ್ತಿಯ ಆಧಾರದ ಮೇಲೆ ಅಳೆಯಲಾಗುತ್ತದೆ. ಆದ್ದರಿಂದಲೇ ನಮ್ಮ ರಾಜತಾಂತ್ರಿಕತೆ, ವಿದೇಶ ನೀತಿ ಹಾಗೂ ಆರ್ಥಿಕ ನೀತಿಗಳು ಅದಕ್ಕೆ ತಕ್ಕಂತೆ ರೂಪಿಸುವುದು ಆವಶ್ಯಕ. ಇದು ಕೇವಲ ತಂತ್ರಗಾರಿಕ ರಾಜನೀತಿಯ ಯುಗವಾಗಿರದೆ, ಇಂದು ಆರ್ಥಿಕ ರಾಜನೀತಿಯಿಲ್ಲದೆ ರಾಜನೀತಿಯು ಸಂಪೂರ್ಣವೆನಿಸದು.

ಭವಿಷ್ಯದಲ್ಲಿ ಭಾರತದ ಪ್ರಭಾವವನ್ನು ಹೆಚ್ಚು ವಿಶಾಲ ಹಾಗೂ ಆಳಕ್ಕೆ ವಿಸ್ತರಿಸಲು ವಿದೇಶ ನೀತಿಯಲ್ಲಿ ಹೊಸ ಆಯಾಮ ಬೆಳೆಸಿಕೊಳ್ಳುವ ಅಗತ್ಯವಿದೆ ಎಂಬ ಅಭಿಮತ ಭಾಜಪದ್ದಾಗಿದೆ. ಕೇವಲ ಪಶ್ಚಿಮ ರಾಷ್ಟ್ರಗಳಿಗೆ ಕೇಂದ್ರೀಕೃತ ಆಂಶಿಕವಾದ ವಿದೇಶ ನೀತಿಯನ್ನು ಅನುಸರಿಸುತ್ತಾ ಬಂದ ಭಾರತ, ಎನ್‌ಡಿಎ ಅವಧಿಯಲ್ಲಿ ಪೂರ್ವಕ್ಕೆ ನೋಡುವ ನೀತಿಯನ್ನು ಪರಿಚಯಿಸಿತು. ಪೂರ್ವಕ್ಕೆ ನೋಡಿದಾಗ, ಚೀನಾ ಹಾಗೂ ಜಪಾನ್ ಹೊರತಾಗಿ ಕೊರಿಯ, ಬರ್ಮ, ಥಾಯ್‌ಲ್ಯಾಂಡ್,ವಿಯೆಟ್ನಾಮ್, ಕಾಂಬೋಡಿಯ, ಸಿಂಗಾಪುರ, ಮಲೇಷ್ಯ, ಜಾವಾ, ಸುಮಾತ್ರ, ಇಂಡೋನೇಷ್ಯ ಹಾಗೂ ಅನ್ಯ ಕೆಲವು ದೇಶಗಳೊಂದಿಗೆ ಭಾರತ ಕೇವಲ ಭೌಗೋಳಿಕ ಹಾಗೂ ರಾಜಕೀಯ ಸಂಬಂಧವಲ್ಲದೆ ಶತಮಾನಗಳ ಸಾಂಸ್ಕೃತಿಕ ಬಾಂಧವ್ಯದಿಂದ ಬೆಸೆದುಕೊಂಡಿದೆ.

ಈ ಎಲ್ಲಾ ರಾಷ್ಟ್ರಗಳೊಂದಿಗೆ ನಾವು ಸಾಂಸ್ಕೃತಿಕ ಭ್ರಾತೃತ್ವವನ್ನು ಹೊಂದಿದ್ದೇವೆ. ಆದ ಕಾರಣ ಈ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧ ಬೆಳೆಸಲು, ಸಾಂಸ್ಕೃತಿಕ ಅಂಶಗಳಿಗೆ ಹೆಚ್ಚಿನ ಮೌಲ್ಯನೀಡುವ ಅಗತ್ಯವಿದೆ.

**ಆರ್ಥಿಕ ಅವ್ಯವಸ್ಥೆ**

ಭಾರತವನ್ನು ಶಕ್ತಿಶಾಲಿ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಲು ಅಟಲ್‌ಜಿ ಅವರ ನೇತೃತ್ವದ ಎನ್‌ಡಿಎ ಸರ್ಕಾರ ದಾರಿ ಮಾಡಿಕೊಟ್ಟಿತ್ತು, ಆದರೆ, ಇಂದಿನ ಸರ್ಕಾರವು ಮಾಡಿದ ಹಣಕಾಸು ಹಾಗೂ ಆರ್ಥಿಕ ದೋಷಗಳಿಂದ ಮತ್ತು ಭ್ರಷ್ಟಾಚಾರದಿಂದ, ಹಾಕಿಕೊಟ್ಟ ಮಾರ್ಗದಲ್ಲಿ ವೇಗ ಪ್ರತಿರೋಧಕಗಳನ್ನು ಹಾಕಿದಂತಾಗಿದೆ.

**ಇಂದು ಜಿಡಿಪಿ ಇಳಿಮುಖ ಕಂಡಿದೆ, ವಿತ್ತೀಯ ಹಾಗೂ ಚಾಲ್ತಿ ಕೊರತೆ ಹೆಚ್ಚುತ್ತಿದೆ, ನಿರುದ್ಯೋಗ ಒಂದೇ ಸಮನೆ ಏರುತ್ತಿದೆ, ರೂಪಾಯಿ ಮೌಲ್ಯ ಕುಸಿಯುತ್ತಲೇಯಿದೆ, ಹೂಡಿಕೆದಾರರು ವ್ಯವಸ್ಥೆಯಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ಗುಣಮಟ್ಟ ಮಾಪನಾ ಸಂಸ್ಥೆಗಳು ಭಾರತದ ಆರ್ಥಿಕ ವಿಶ್ವಾಸಾರ್ಹತೆಯ ಮೌಲ್ಯವನ್ನು ತಗ್ಗಿಸುತ್ತಿದ್ದಾರೆ. ಒಟ್ಟಾರೆ, ಭಾರತೀಯ ಅರ್ಥವ್ಯವಸ್ಥೆಯ ಪ್ರತಿಷ್ಠೆ ಮಣ್ಣುಪಾಲಾಗುತ್ತಿದೆ.**

ಡಾಲರ್ ಹೋಲಿಕೆಯಲ್ಲಿ ರೂಪಾಯಿ ಮೌಲ್ಯ ಕುಸಿಯುತ್ತಿದ್ದು, ಅಂತಾರಾಷ್ಟ್ರೀಯ ಹೂಡಿಕೆದಾರರು ಭಾರತದ ಮೇಲಿದ್ದ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಎನ್‌ಡಿಎ ಆಳ್ವಿಕೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಚೀನಾ ನಂತರ ಭಾರತ ಆಕರ್ಷಣೀಯ ಹೂಡಿಕೆ ತಾಣವಾಗಿತ್ತು, ಆದರೆ ಇಂದು ಪರಿಸ್ಥಿತಿ ತದ್ವಿರುದ್ಧವಾಗಿದೆ. **ಎನ್‌ಡಿಎ ಆಳ್ವಿಕೆಯಲ್ಲಿ ಭಾರತದ ಯಶೋಗಾಥೆ ಎಂಬ ಅನಿಸಿಕೆ ಮೂಡಿತ್ತು, ಆದರೆ, ಇಂದು ಯುಪಿಎ ಆಳ್ವಿಕೆಯಲ್ಲಿ ಭಾರತದ ಯಶೋಗಾಥೆ ಸಮಾಪ್ತವಾಗಿದೆ ಎಂಬ ಅನಿಸಿಕೆ ಮೂಡಿದೆ.**

ಸ್ನೇಹಿತರೆ, ಅಧಿಕಾರಕ್ಕೆ ಬಂದ ಕೇವಲ 100 ದಿವಸಗಳಲ್ಲಿ ಬೆಲೆ ಏರಿಕೆಯನ್ನು ಸಂಪೂರ್ಣ ನಿಯಂತ್ರಿಸುವ ಆಶ್ವಾಸನೆಯನ್ನು ಯುಪಿಎ ಸರ್ಕಾರ 2008ರ ಚುನಾವಣೆ ಸಮಯದಲ್ಲಿ ನೀಡಿದ್ದನ್ನು ಇಲ್ಲಿ ಸ್ಮರಿಸಲು ಬಯಸುತ್ತೇನೆ. ಆ ಒಂದು ವಾಗ್ದಾನಕ್ಕೆ ಇಂದು ಏನಾಗಿದೆ? ಇಂದು ಒಂಬತ್ತು ವರ್ಷಗಳ ದೀರ್ಘ ಅಧಿಕಾರಾವಧಿಯ ನಂತರವೂ, ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ

ಜನವರಿ 2013ರಲ್ಲಿ ಹಣದುಬ್ಬರ ಶೇಕಡ 6.62ರಷ್ಟಿತ್ತು. ಈ ಒಂದು ಅಂಕಿ–ಅಂಶವನ್ನು ಆಧರಿಸಿ, ಹಣದುಬ್ಬರದ ದರ 38 ತಿಂಗಳಲ್ಲೇ ಕನಿಷ್ಠ ಪ್ರಮಾಣಕ್ಕೆ ಇಳಿದಿದೆ ಎಂಬ ವಾದವನ್ನು ಸರ್ಕಾರ ಮಾಡಿದೆ. ಆದರೆ ನಿಜ ಸ್ಥಿತಿಯೆಂದರೆ, ಅಸಮರ್ಪಕ ವಿತರಣೆಯ ಕಾರಣ, ಕೈಗಾರಿಕ ಉತ್ಪನ್ನಗಳ ಬೆಲೆಗಳು ಕ್ಷೀಣಿಸುತ್ತಿವೆ ಹಾಗೂ ಅಗತ್ಯ ಸಾಮಗ್ರಿಗಳ ಬೆಲೆಗಳು ಗಗನಕ್ಕೇರಿವೆ. ಆದ ಕಾರಣ, ಗ್ರಾಹಕರ ಬೆಲೆ ಸೂಚ್ಯಾಂಕ ನೇರವಾಗಿ ಜನಸಾಮಾನ್ಯರ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತಿದ್ದು ಜನವರಿ 2013ರಲ್ಲಿ ಶೇಕಡ 11.88ರ ಮಟ್ಟಕ್ಕೆ ಏರಿದೆ.

ದೇಶದಲ್ಲಿ ವಿತ್ತೀಯ ಕೊರತೆ ಶೇಕಡ 5.2ರಷ್ಟು ಏರಿರುವುದರಿಂದ ಗ್ಯಾಸ್ ಮತ್ತು ಡೀಸಲ್ ಮೇಲಿನ ವಿನಾಯತಿಯನ್ನು ತಗ್ಗಿಸುವ ಅಗತ್ಯವಿದೆ ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಅಮೇರಿಕ ಅಲ್ಲದೆ, ಪಾಕಿಸ್ತಾನ ಮತ್ತು ಶ್ರೀಲಂಕಾ ದೇಶಗಳ ತುಲನೆಯಲ್ಲಿ ಭಾರತ ಗರಿಷ್ಠ ಪ್ರಮಾಣದ ಪೆಟ್ರೋಲ್ ಬೆಲೆಗಳನ್ನು ಹೊಂದಿದೆ. ಇದಕ್ಕೆ ಜವಾಬ್ದಾರರು ಯಾರು? ಶೇಕಡ 30ರಷ್ಟು ಬೇಡಿಕೆಯನ್ನು ದೇಶದಲ್ಲೇ ಈಡೇರಿಸುವ ಸಾಮರ್ಥ್ಯಯಿರುವ ಈ ಸಮಯದಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸಿದೆ. ಪೆಟ್ರೋಲ್ ಉತ್ಪನ್ನಗಳ ಬೆಲೆಗಳು ಒಂದೇ ಸಮನೆ ಏರುತ್ತಿರುವುದರಿಂದ ನಗರಗಳಲ್ಲಿ ಮಧ್ಯಮವರ್ಗದ ಬೆನ್ನು ಹುರಿ ಮುರಿದಂತಾಗಿದೆ.

ಹಾಲಿ ಮಂಡಿಸಲಾದ ಮುಂಗಡ ಪತ್ರದಲ್ಲಿ ಬೆಲೆ ಏರಿಕೆ ನಿಯಂತ್ರಿಸುವ ಮತ್ತು ಆರ್ಥಿಕ ವ್ಯವಸ್ಥೆಯ ಹಿಂಜರಿತವನ್ನು ನಿಲ್ಲಿಸುವ ಯಾವುದೇ ಪ್ರಭಾವಿ ಕ್ರಮಗಳನ್ನು ಪ್ರಕಟಿಸಿಲ್ಲ. ಕೃಷಿ ಕ್ಷೇತ್ರಗಳಲ್ಲಿ ವಿತರಣಾ ಕೊಂಡಿಗಳನ್ನು ಬಲಪಡಿಸುವ ಯಾವುದೇ ಅವಕಾಶ ಕಲ್ಪಿಸಿಲ್ಲ. ಆದ್ದರಿಂದ ಬೆಲೆಗಳು ಮತ್ತಷ್ಟು ಏರುವ ಸಾಧ್ಯತೆ ಹೆಚ್ಚಿವೆ. ಉತ್ತರ ಹಾಗೂ ಪೂರ್ವ ರಾಜ್ಯಗಳಿಗೆ ನಿಗದಿ ಪಡಿಸಿದ ಅನುದಾನ ಸಮರ್ಪಕವಾಗಿಲ್ಲ. ರೈಲು ಮುಂಗಡ ಪತ್ರದಲ್ಲಿ ರೈಲು ಶುಲ್ಕವನ್ನು ಪೆಟ್ರೋಲ್ ಹಾಗೂ ಡೀಸಲ್ ಬೆಲೆಗಳೊಂದಿಗೆ ಹೊಂದಿಸಿರುವ ಕಾರಣ ನಿರಂತರವಾಗಿ ರೈಲು ಪ್ರಯಾಣ ದರವೂ ಹೆಚ್ಚಾಗುತ್ತಿರುತ್ತದೆ.

ಇವುಗಳಲ್ಲದೆ, ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಬಡ್ಡಿ ದರವನ್ನು ಹೆಚ್ಚಿಸುತ್ತಲೆಯಿದೆ. ಇದರಿಂದ ಬೆಲೆಗಳನ್ನು ನಿಯಂತ್ರಿಸಬಹುದು ಎಂಬುದು ಅವರ ವಾದ, ಆದರೆ ವಾಸ್ತವವಾಗಿ ನಮ್ಮ ಅನುಭವದಂತೆ, ಬಡ್ಡಿ ದರ ಹಾಗೂ ಬೆಲೆಗಳು ಇವೆರಡು ನಿರಂತರವಾಗಿ ಏರುತ್ತಲೇ ಇವೆ. ಇದರಿಂದ ಕೈಗಾರಿಕಾ ವಲಯದ ಸಂಪೂರ್ಣ ವ್ಯವಸ್ಥೆ ಕುಸಿದಿದ್ದು ನಿರುದ್ಯೋಗ ಸಮಸ್ಯೆ ಉಲ್ಬಣಿಸಿದೆ.

**ಎನ್‌ಡಿಎ ಆಳ್ವಿಕೆಯ ಅವಧಿಯಲ್ಲಿ ಅರ್ಥವ್ಯವಸ್ಥೆ ಸಮೃದ್ಧವಾಗಿತ್ತು, ಯುಪಿಎ ಆಳ್ವಿಕೆಯಲ್ಲಿ ಅರ್ಥವ್ಯವಸ್ಥೆ ಸಂಪನ್ಮೂಲ ಕೊರತೆಯನ್ನು ಅನುಭವಿಸುತ್ತಿದೆ.**

**ಚಿಲ್ಲರೆ ವಹಿವಾಟಿನಲ್ಲಿ ವಿದೇಶಿ ನೇರ ಭಂಡವಾಳ ಆಕರ್ಷಣೆ**

ಮಧ್ಯಮ ಹಾಗೂ ಸಣ್ಣ ವ್ಯಾಪಾರಿಗಳ ಹಿತಕ್ಕೆ ಘಾಸಿಪಡಿಸಿ, ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ನೀತಿಗೆ ಅನುಮೋದನೆ ನೀಡಿದ್ದು, ಎಲ್ಲಾ ಸಾಮಾಜಿಕ ಹಾಗೂ ರಾಜಕೀಯ ಪಕ್ಷಗಳ ಆಕ್ಷೇಪಗಳನ್ನು ಕಡೆಗಣಿಸಿದೆ. ಇದರ ಅನುಮೋದನೆಗಾಗಿ ಸರ್ಕಾರ ಸತ್ಯವಲ್ಲದ ಬಣ್ಣಬಣ್ಣದ ಭವ್ಯ ಕಲ್ಪನೆಯನ್ನು ಮಾಡಿತ್ತು. ಇಂದು ಅಮೇರಿಕಾದ ರಾಷ್ಟ್ರಪತಿಗಳೇ ತಮ್ಮ ಜನರಿಗೆ ದೇಶೀಯ ವಸ್ತುಗಳನ್ನೇ ಕೊಳ್ಳುವ ಒತ್ತಾಯ ಮಾಡುತ್ತಿದ್ದಾರೆ. ಹೀಗಿರುವಾಗ, ಎಫ್‌ಡಿಐ ನಮ್ಮೆಲ್ಲ ಸಮಸ್ಯೆಗಳನ್ನು ಪರಿಹರಿಸಲಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಲಾಗುತ್ತಿದೆ. ಆದರೆ ವಸ್ತುಸ್ಥಿತಿ ಭಿನ್ನವಾಗಿದ್ದು, ಸಣ್ಣ ಹಾಗೂ ಮಧ್ಯಮ

ದಿನಸಿ ಅಂಗಡಿಯವರು ಕಂಗಾಲಾಗಿ, ರೈತರು ಯಾವುದೇ ಲಾಭಗಳಿಸದೆ, ಹಲವರು ತಮ್ಮ ಉದ್ಯೋಗ ಕಳೆದುಕೊಳ್ಳಲಿದ್ದಾರೆ.

**ಸಣ್ಣ ಮತ್ತು ಮಧ್ಯಮ ವಾಣಿಜ್ಯೋದ್ಯಮಿಗಳ ಹಿತ ಕಾಪಾಡಲು ಭಾಜಪ ಕಟಿಬದ್ಧವಾಗಿದ್ದು, ಕೇಂದ್ರದಲ್ಲಿ ಸರ್ಕಾರ ಮಾಡುವ ಅವಕಾಶ ಸಿಕ್ಕರೆ, ಈ ದಿಶೆಯಲ್ಲಿ ಅಗತ್ಯ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳಲಿದ್ದೇವೆ.**

ಜುಲೈ 2008ರಲ್ಲಿ ಭಾರತ–ಅಮೇರಿಕ ಪರಮಾಣು ಒಪ್ಪಂದ ಅಂಗೀಕಾರ ಪಡೆಯುವ ಸಮಯದಲ್ಲಿ, ದೇಶದ ಇಂಧನ ಸಮಸ್ಯೆಗಳನ್ನು ಬಗೆಹರಿಸುವ ಮಾತನ್ನು ಸರ್ಕಾರ ಆಡಿತ್ತು. ಆದರೆ ನಾಲ್ಕುವರೆ ವರ್ಷಗಳ ನಂತರವೂ ನಮ್ಮ ಇಂಧನ ಪೂರೈಕೆ ಪ್ರಮಾಣ ಹೇಗಿದೆ? ಈಗ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂದರೆ, ಕಳೆದ ವರ್ಷ ಜುಲೈನಲ್ಲಿ ಇಡೀ ಭಾರತ ಸಂಪೂರ್ಣ ಎರಡು ದಿವಸಗಳು ಕತ್ತಲೆಯಲ್ಲಿ ಕಳೆಯಬೇಕಾಯಿತು. ಭವಿಷ್ಯದಲ್ಲಿ ಎಫ್‌ಡಿಐ ವಿಚಾರದಲ್ಲಿ ನೀಡಲಾದ ಭವ್ಯ ಕಲ್ಪನೆಗಳೂ ಸಹ ಇದೇ ರೀತಿ ಮಣ್ಣು ಕಚ್ಚಲಿದೆ.

**ಭ್ರಷ್ಟಾಚಾರ**

ಕಳೆದ ಒಂಬತ್ತು ವರ್ಷಗಳ ಆಳ್ವಿಕೆಯಲ್ಲಿ ಯುಪಿಎ ಸರ್ಕಾರ ಭ್ರಷ್ಟಾಚಾರದ ಮಸಿ ಬಳಿದ ನಿರ್ದಿಷ್ಟ ರಚನೆಯ ಅಧ್ಯಾಯಗಳನ್ನು ಬರೆದಿದೆ. ಅದೆಂದರೆ, 'ಹೊಣೆಗಾರಿಕೆಯಿಂದ ವಿಮುಕ್ತರಾಗಿ' ಮತ್ತು 'ಎಲ್ಲವನ್ನು ಎನ್‌ಡಿಎ ಸರ್ಕಾರದ ಮೂತಿಗೆ ಬಳಿಯರಿ'.

ಇಂತಹ ಅನುಸರಣೆಯಲ್ಲಿ ಇತ್ತೀಚಿನ ಉದಾಹರಣೆ ಎಂದರೆ ಅಗಸ್ಟಾವ್ಯಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ವ್ಯವಹಾರ. ಈ ಹೆಲಿಕಾಪ್ಟ್‌ರ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕಾ ಅಧಿಕಾರಿ ಭಾರತದಲ್ಲಿ ಕೆಲವರಿಗೆ ಲಂಚ ನೀಡಿದ ಆರೋಪದ ಮೇಲೆ ಇಟಲಿಯಲ್ಲಿ ಸೆರೆ ಹಿಡಿಯಲಾಗಿದೆ.

ಆಶ್ಚರ್ಯವೆಂದರೆ ಅಧಿಕಾರಿಯನ್ನು ಇಟಲಿಯಲ್ಲಿ ಸೆರೆಹಿಡಿಯಲಾಗಿದೆ. ಭಾರತದಲ್ಲಿ ಲಂಚ ಸ್ವೀಕರಿಸಿದ ವ್ಯಕ್ತಿಯಾರು ಎಂಬ ರಹಸ್ಯ ಯುಪಿಎ ಸರ್ಕಾರಕ್ಕೆ ತಿಳಿದುಬಂದಿಲ್ಲ. ಅದಕ್ಕೆ ಈ ಮಾಹಿತಿ ಇದ್ದರು, ಅದು ಪ್ರಜ್ಞಾಪೂರ್ವಕ ಮೌನ ಆಚರಿಸಲು ಬಯಸಿದೆ. ಸರ್ಕಾರ 11 ತಿಂಗಳುಗಳು ಮೌನವಾಗಿದ್ದು ನಂತರ ಕಂಪನಿಗೆ ನಿರ್ದೋಷಿಯ ಪಟ್ಟ ನೀಡಿದೆ. ಈ ವಿಚಾರಗಳು ಸಾರ್ವಜನಿಕ ಪರಿಜ್ಞಾನಕ್ಕೆ ಬಂದೊಡನೆ, ಯುಪಿಎ ಸರ್ಕಾರ ತಕ್ಷಣ ತನ್ನ ನಿರಂತರ ಚಾಳಿಗೆ ಅನುಸಾರ ತನ್ನ ನಿಲುವನ್ನು ಬದಲಾಯಿಸಿ, ಒಂಬತ್ತು ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಎನ್‌ಡಿಎ ಸರ್ಕಾರ ಇದಕ್ಕೆಲ್ಲ ಹೊಣೆ ಎಂಬ ಆಪಾದನೆ ಹೊರಡಿಸಿತು.

ಭಾರತ–ಅಮೇರಿಕ ಪರಮಾಣು ಒಪ್ಪಂದ, ಸಿಡಬ್ಲ್ಯುಜಿ, 2ಜಿ ಹಾಗೂ ಅಗಸ್ಟಾವ್ಯಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ವಿಚಾರಗಳು ಸೇರಿದಂತೆ ಅನ್ಯ ಎಲ್ಲಾ ವಿಚಾರಗಳ ನೀತಿಗಳು ಎನ್‌ಡಿಎ ಸರ್ಕಾರದ ಅವಧಿಯಲ್ಲೇ ಜರುಗಿದ್ದರೆ, ನೀವು ಒಂಬತ್ತು ವರ್ಷಗಳು ಮಾಡಿದ್ದಾದರು ಏನು? ಎನ್‌ಡಿಎ ನೀತಿಗಳನ್ನು ಮಾಡಿದ್ದರೆ, ಆ ನೀತಿಗಳಿಗೆ ಮಸಿ ಬಳಿಯುವ ಕೆಲಸ ಮಾಡಿದವರು ನೀವು, ಮತ್ತು ಈಗ ನೀವೆ ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದೀರಿ.

**‘ಯಾರಿಗು ತಪ್ಪಿಸಿಕೊಳ್ಳುವ ಅವಕಾಶವಿಲ್ಲ’ ಎಂದು ರಕ್ಷಣಾ ಸಚಿವರು ಹೇಳುತ್ತಾರೆ. ಕಾನೂನಿನ ಕೈಗಳು ಬಹಳ ಉದ್ದವೆಂದು ಹೇಳಲಾಗುತ್ತದೆ, ರಕ್ಷಣಾ ಸಚಿವರು ಮತ್ತು ಯುಪಿಎ ಸರ್ಕಾರ ಆಧಿಕಾರದಲ್ಲಿರುವಷ್ಟು ದಿನ, ಕಾನೂನಿನ ಕೈಗಳು ಹೆಲಿಕಾಪ್ಟರ್ ವ್ಯವಹಾರದ ಮುಖ್ಯ ಆರೋಪಿಯ ವರೆಗು ಹೋಗುವುದು ದುಸ್ತರ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಪ್ರಾಮಾಣಿಕ ಮನಸ್ಸು ಸರ್ಕಾರಕ್ಕಿದ್ದರೆ, ಜೆಪಿಸಿ ನೇಮಿಸುವ ಮೂಲಕ ಕಣ್ಣೊರೆಸುವ ತಂತ್ರವನ್ನು ಅನುಸರಿಸುವ ಬದಲು, ಸೂಕ್ತ ಎಫ್ಐಆರ್ ದರ್ಜುಮಾಡಿ ಕ್ರಿಮಿನಲ್ ತನಿಖೆಯನ್ನು ಆರಂಭಿಸಬೇಕು.**

ಯುಪಿಎ ಆಳ್ವಿಕೆಯಲ್ಲಿ ಭ್ರಷ್ಟ ನೀತಿ ಅನುಸರಿಸುವುದರಿಂದ, ಐಟಿ ಕೇಂದ್ರ ಹಾಗೂ ಭೌತಿಕ ನೆಲೆಯ ಅರ್ಥವ್ಯವಸ್ಥೆ ಹೊಂದಿದ ಭಾರತ ಎಂಬ ಹೆಗ್ಗಳಿಕೆ ದೂರವಾಗಿ ಭ್ರಷ್ಟಾಚಾರಕ್ಕೆ ಹೆಸರುವಾಸಿ ರಾಷ್ಟ್ರವೆಂಬ ಪಟ್ಟಗಳಿಸಿದೆ.

ವ್ಯಾಪಕ ಭ್ರಷ್ಟಾಚಾರದಿಂದ ಭಾರತದ ವರ್ಚಸ್ಸಿನ ಮೇಲೆ ಕಪ್ಪು ಮಸಿ ಅಂಟಿದ್ದು, ಹಿಂದೆಂದೂ ಹೀಗಾಗಿರಲಿಲ್ಲ. ಇಂದು, ನಮ್ಮನ್ನು ವಿಶ್ವದ ಅತಿ ಭ್ರಷ್ಟ ರಾಷ್ಟ್ರಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

ಟ್ರಾನ್ಸಪರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆಯು ಭ್ರಷ್ಟಾಚಾರ ಗ್ರಹಿಕೆ ಸೂಚಿಯಲ್ಲಿ ಭಾರತಕ್ಕೆ 94ನೇ ಸ್ಥಾನವನ್ನು ನೀಡಿದೆ. 2007ರಲ್ಲಿ ಮೊದಲ ಬಾರಿಗೆ ಒಟ್ಟು 180 ಭ್ರಷ್ಟ ರಾಷ್ಟ್ರಗಳಲ್ಲಿ ಭಾರತಕ್ಕೆ 72ನೇ ಸ್ಥಾನ ನೀಡಲಾಗಿತ್ತು. ವಿಶ್ವ ಬ್ಯಾಂಕಿನ ದೇಶದ ಸಾಧನೆ ಮತ್ತು ಸಾಂಸ್ಥಿಕ ಮಾಪನ ಟಿಪ್ಪಣಿಯಲ್ಲಿ ಭಾರತವನ್ನು ಭ್ರಷ್ಟ ರಾಷ್ಟ್ರವೆಂದು ಕರೆಯಲಾಗಿದೆ.

ವಿಶ್ವ ಬ್ಯಾಂಕಿನ “ವಹಿವಾಟು ಯೋಗ್ಯತೆ ಸೂಚಿಯಲ್ಲಿ” ಒಟ್ಟು 183 ರಾಷ್ಟ್ರಗಳ ಪೈಕಿ ಭಾರತಕ್ಕೆ 132ನೇ ಸ್ಥಾನ ಲಭಿಸಿದೆ. ಹೋಂಡುರಸ್ ಹಾಗೂ ಗಾಜಾ ಸ್ಟ್ರಿಪ್‌ಗಿಂತಲೂ ಹಿಂದೆಯಿರುವ ಭಾರತ ಕೇವಲ ನೈಜೀರಿಯ ಮತ್ತು ಸೀರಿಯಾಗಳಂತಹ ರಾಷ್ಟ್ರಗಳಿಗಿಂತ ಮೇಲಿನ ಸ್ಥಾನ ಪಡೆದಿದೆ.

ಮಯನ್ಮಾರ್, ಸುಡಾನ್, ಅಫ್‌ಘಾನಿಸ್ಥಾನ್, ಸೋಮಾಲಿಯ ಹಾಗೂ ಉತ್ತರ ಕೋರಿಯ ರಾಷ್ಟ್ರಗಳು ವಿಶ್ವದ ಭ್ರಷ್ಟ ರಾಷ್ಟ್ರಗಳ ಪಟ್ಟಿಯ ತಳದಲ್ಲಿವೆ. ದೇಶದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕದೆಯಿದ್ದ ಪಕ್ಷದಲ್ಲಿ, ಮೇಲೆ ನಮೂದಿಸಿದ ರಾಷ್ಟ್ರಗಳ ಸಾಲಿನಲ್ಲಿ ನಮ್ಮನ್ನು ನಾವು ಕಾಣಬೇಕಾಗುತ್ತದೆ.

ಕಳೆದ ಒಂಬತ್ತು ವರ್ಷಗಳಲ್ಲಿ ಭ್ರಷ್ಟಾಚಾರ ಎಗ್ಗಿಲ್ಲದೆ ಬೆಳೆಯಲು ಕಾಂಗ್ರೆಸ್ ಪಕ್ಷವೊಂದೇ ಮುಖ್ಯ ಕಾರಣ. ಇಂದು ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮಿಂದಿದ್ದು, ಅಬ್ರಹಾಂ ಲಿಂಕನ್ ಅವರು ಪ್ರಜಾಪ್ರಭುತ್ವಕ್ಕೆ ನೀಡಿದ ಪರಿಭಾಷೆಯನ್ನು ಈ ಸರ್ಕಾರ ಸಂಪೂರ್ಣ ಮಾರ್ಪಡಿಸಿದೆ. ನನ್ನ ಅನಿಸಿಕೆಯಂತೆ ಈ ಸರ್ಕಾರ ‘ಭ್ರಷ್ಟರಿಂದ,ಭ್ರಷ್ಟತೆಗಾಗಿ ಮತ್ತು ಭ್ರಷ್ಟರಿಗಾಗಿ’ ನಿರ್ಮಿಸಲ್ಪಟ್ಟಿದೆ.

ಸ್ನೇಹಿತರೆ, ಸಾರ್ವಜನಿಕರು ಸಾಮಾನ್ಯವಾಗಿ ರಾಶಿಫಲವನ್ನು ಚರ್ಚಿಸುತ್ತಾರೆ. ಕೆಲವು ಬಾರಿ ಸ್ವಾಭಾವಿಕವಾಗಿ ಸಮಸ್ಯೆಯ ಪರಿಹಾರದ ಹೆಸರು ಅದೇ ಆಗಿರುತ್ತದೆ. ಉದಾಹರಣೆಗೆ, ರಾಮ ರಾವಣನ್ನು ಕೊಂದ, ಕೃಷ್ಣಾ

ಕಂಸನನ್ನು ಕೊಂದ, ಒಬಾಮಾ ಒಸಾಮಾನನ್ನು ಕೊಂದ ಮತ್ತು ಅದೇ ರೀತಿ ನನಗನಿಸುವಂತೆ ಭ್ರಷ್ಟಾಚಾರ ಕಾಂಗ್ರೆಸನ್ನು ಕೊಲ್ಲುತ್ತದೆ(corruption will kill Congress).

ಸ್ನೇಹಿತರೆ, ಅರ್ಥಶಾಸ್ತ್ರದಲ್ಲಿ ಅವಕಾಶ ವೆಚ್ಚವೆಂಬ ನೀತಿಯಿದೆ. ಅದರಂತೆ, ಒಂದು ಕೆಲಸಕ್ಕೆ ವಿನಿಯೋಗಿಸುವ ಹಣವನ್ನು ಬೇರೆ ಕಾರ್ಯಕ್ಕೆ ವರ್ಗಾಯಿಸಿದರೆ, ಆಗ ಅದರ ಮೌಲ್ಯವನ್ನು ವೆಚ್ಚದ ಲೆಖ್ಖ ಹಾಕುವಾಗ ಪರಿಗಣಿಸಬೇಕಾಗುತ್ತದೆ. ಈ ಅರ್ಥಶಾಸ್ತ್ರದ ನೀತಿಯನ್ನು ಭ್ರಷ್ಟಾಚಾರಕ್ಕೆ ಬಳಕೆಯಾದ ಮೊತ್ತದ ಲೆಖ್ಖ ಹಾಕುವಾಗ ಮಾಡಿದಾಗ, ಭ್ರಷ್ಟಾಚಾರದ ವೆಚ್ಚ ನಾವು ಅಂದುಕೊಳ್ಳುವುದಕ್ಕಿಂತ ಹೆಚ್ಚಿನದ್ದಾಗುತ್ತದೆ.

**ಕಲ್ಲಿದ್ದಲು ಹಂಚಿಕೆ, 2ಜಿ ತರಂಗಾಂತರ, ಆಹಾರ ಧಾನ್ಯ ಹಗರಣ ಹಾಗೂ ಹತ್ತು ಹಲವು ಹಗರಣಕ್ಕೆ ಪೋಲಾದ ಕೋಟಿಗಟ್ಟಲೆ ಸಾರ್ವಜನಿಕ ಹಣವನ್ನು ಸರಿಯಾದ ರೀತಿಯಲ್ಲಿ ಬಳಸಿದ್ದರೆ, ನಮ್ಮ ದೇಶದ ಎಲ್ಲಾ ಹಳ್ಳಿಗಳು ಮತ್ತು ನಗರಗಳನ್ನು ಒಳ್ಳೆಯ ರಸ್ತೆಗಳ ಮೂಲಕ ಜೋಡಿಸಬಹುದಿತ್ತು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಬಹುದಿತ್ತು. ಸಾವಿರಾರು ಆಸ್ಪತ್ರೆಗಳು ಮತ್ತು ಶಾಲೆಗಳನ್ನು ತೆರೆಯಬಹುದಿತ್ತು ಮತ್ತು ವಿಶ್ವ ದರ್ಜೆಯ ತಾಂತ್ರಿಕ ಸಂಸ್ಥೆಗಳನ್ನು ಆರಂಭಿಸಬಹುದಿತ್ತು ಹಾಗೂ ಸೇನೆಗೆ ನೂರಾರು ಬಗೆಯ ಆಧುನಿಕ ಶಸ್ತ್ರಗಳನ್ನು ಪೂರೈಸಬಹುದಿತ್ತು. ಆದ್ದರಿಂದ ನನ್ನ ನಂಬಿಕೆಯಂತೆ ಭ್ರಷ್ಟಾಚಾರವನ್ನು ತಡೆದಿದ್ದರೆ, ಭಾರತ ಈಗಾಗಲೆ ಮಹಾ ಶಕ್ತಿಯಾಗಿ ಮೂಡುತಿತ್ತು**. ಆದರೆ ಇದಕ್ಕೆ ತದ್ವಿರುದ್ಧವಾಗಿ, ಪ್ರಸ್ತುತ ಸರ್ಕಾರ ತನ್ನ ಭ್ರಷ್ಟ ನೀತಿಯಿಂದಾಗಿ ಜನಸಾಮಾನ್ಯರು ಪ್ರತಿಗಾಮಿ ಮನೋಸ್ಥಿತಿಯನ್ನು ಹೊಂದಿದ್ದು, ಇಡೀ ಸಮಾಜ ಜ್ವಾಲಾಮುಖಿಯ ಮೇಲೆ ಕುಳಿತಿರುವಂತಿದ್ದು, ಇದನ್ನು ತಕ್ಷಣ ನಿಲ್ಲಿಸುವ ಅಗತ್ಯವಿದೆ.

**ಈ ಸರ್ಕಾರದ ಆರ್ಥಿಕ ಪ್ರಗತಿಯನ್ನು ಗಣಿತದ ಸೂತ್ರದ ರೂಪದಲ್ಲಿ ವಿವರಿಸಬೇಕಾದರೆ, ಸರ್ಕಾರದ ಆರ್ಥಿಕ ನೀತಿಯನ್ನು 8/9,4/5 ಸೂತ್ರದಲ್ಲಿ ವ್ಯಕ್ತಪಡಿಸಬಹುದು**. ಈ ಸೂತ್ರ ಯಾವುದು ಎಂದು ನೀವು ಕೇಳಬಹುದು. ಎನ್‌ಡಿಎ ಆಳ್ವಿಕೆಯಲ್ಲಿ ಅಭಿವೃದ್ಧಿ ದರ ಸುಮಾರು ಶೇಕಡ 8/9ರಷ್ಟಿತ್ತು ಹಾಗೂ ಹಣದುಬ್ಬರ ಸುಮಾರು ಶೇಕಡ 4/5ರಷ್ಟಿತ್ತು. ಯುಪಿಎ ಸರ್ಕಾರದ 8/9 ವರ್ಷದ ಆಳ್ವಿಕೆಯಲ್ಲಿ ಈ ಸೂತ್ರ ವಿಮುಖವಾಗಿದೆ. ಹಣದುಬ್ಬರದ ದರ ಶೇಕಡ 8/9ನ್ನು ಮೀರಿದೆ ಹಾಗೂ ಅಭಿವೃದ್ಧಿ ದರ ಸುಮಾರು ಶೇಕಡ 4/5 ಇಳಿಮುಖ ಕಂಡಿದೆ.

ಭಾಜಪ ಹಾಗೂ ರಾಜ್ಯಗಳಲ್ಲಿರುವ ಎನ್‌ಡಿಎ ಸರ್ಕಾರಗಳು ಉತ್ತಮ ಅಭಿವೃದ್ಧಿ ದರಗಳನ್ನು ಸಾಧಿಸಿವೆ.

ಕೇಂದ್ರದಲ್ಲಿ ನಮ್ಮ ಸರ್ಕಾರ ರಚನೆಯಾದರೆ ವೃದ್ಧಿದರ ಕೇವಲ ಶೇಕಡ ಒಂಬತ್ತು ಅಥವಾ 10ರಷ್ಟಿರುವುದಿಲ್ಲ, ನಾವು ನಿರೂಪಿಸುವ ಎತ್ತರದ ಗುರಿಗಳ ಅನುರೂಪವಾಗಿ ಆರ್ಥಿಕ ನೀತಿಗಳನ್ನು ರೂಪಿಸುತ್ತೇವೆ. 21ನೇ ಶತಮಾನವನ್ನು ಏಶ್ಯಾದ ಶತಮಾನವನ್ನು ವಿಶ್ವ ಪರಿಗಣಿಸಿದ್ದು, ಆ ಜಗತ್ತಿಗೆ ನಾಯಕತ್ವದ ಪೂರೈಕೆಯನ್ನು ಭಾರತ ಮಾಡಲಿದ್ದು, ಚೀನಾವನ್ನು ಮನಸ್ಸಿನಲ್ಲಿಟ್ಟುಕೊಂಡು ನೀತಿ ನಿರೂಪಣೆ ಮಾಡುವ ಅಗತ್ಯವಿದೆ. ಇಂದು, ಚೀನಾದ ಜಿಡಿಪಿ ಸುಮಾರು 8.5 ಟ್ರಿಲಿಯನ್ ಡಾಲರ್ ನಷ್ಟಿದೆ ಹಾಗೂ ಭಾರತದ ಜಿಡಿಪಿ 1.8 ಟ್ರಿಲಿಯನ್ ಡಾಲರ್‌ಯಿದೆ. ಈ ಒಂದು ವಿಶಾಲ ಅಂತರವನ್ನು ಸರಿದೂಗಿಸುವ ದೃಷ್ಟಿಯಿಂದ ನಮ್ಮ ಆರ್ಥಿಕ ನೀತಿಗಳನ್ನು ರೂಪಿಸಬೇಕಾಗಿದೆ.

ಕೇವಲ ಆರ್ಥಿಕ ಮತ್ತು ಪ್ರಮುಖ ಕ್ಷೇತ್ರಗಳಲ್ಲದೆ ಕೃಷಿ ವಲಯದಲ್ಲೂ ಯುಪಿಎ ಸರ್ಕಾರದ ಹಗರಣಗಳ ವಾರ್ತೆಗಳು ಬೆಳಕಿಗೆ ಬರುತ್ತಿವೆ. ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿರುವಂತೆ, ಕೇಂದ್ರ ಸರ್ಕಾರ 2008ರಲ್ಲಿ ಪ್ರಕಟಿಸಿದ ಸಾಲ ಮನ್ನಾ ಯೋಜನೆಯಲ್ಲೂ ಅಗಾಧ ಭ್ರಷ್ಟಾಚಾರವಾಗಿರುವ ಶಂಕೆಯಿದೆ.

ಮಾಧ್ಯಮ ವರದಿಯ ಅನುಸಾರ, ಬೆಳಕಿಗೆ ಬಂದಿರುವ ಅಂಶಗಳೆಂದರೆ, 3.5 ಕೋಟಿ ರೈತರಿಗೆ ಮಾಡಿದ ಯೋಜನೆ ಅನುಷ್ಠಾನವಾದಾಗ ಭಾರಿ ತಪ್ಪುಗಳು ಮತ್ತು ಲೋಪಗಳು ನಡೆದಿರುವ ಆಂಶ ಕೇವಲ 90,000 ರೈತರ ಲೆಖ್ಖ ಪರಿಶೋಧಿಸುವ ಮೂಲಕ ಸಿಎಜಿ ಕಂಡುಹಿಡಿದಿದೆ. 2008ರಲ್ಲಿ ಪ್ರಕಟಿಸಲಾದ ರೈತರ ಸಾಲ ಮನ್ನಾ ಯೋಜನೆಯ ಅನುಷ್ಠಾನದಲ್ಲಿ ಹಗರಣ ನಡೆದಿದೆ ಎಂದು ಸಿಎಜಿಯ ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿರುವ ಅಂಶದ ವಿಸ್ತೃತ ತನಿಖೆ ನಡೆದು ರೈತರ ಹೆಸರಿನಲ್ಲಿ ಹಣ ಗುಳುಂ ಮಾಡಿದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು.

**ರೈತರು ಮತ್ತು ಹಿಂದುಳಿದವರು**

ಭಾರತೀಯ ಅರ್ಥವ್ಯವಸ್ಥೆಯ ಇಂದಿನ ನೈಜ ಚಿತ್ರಣವೆಂದರೆ, ಎನ್‌ಡಿಎ ಆಳ್ವಿಕೆ ಅವಧಿಯಲ್ಲಿದ್ದ ವೃದ್ಧಿ ದರ ಇಂದು ಸುಮಾರು ಅರ್ಧಕ್ಕೆ ಬಂದು ನಿಂತಿದೆ. ಬಡವರು ಮತ್ತು ಬಲ್ಲಿದರ ನಡುವೆಯಿರುವ ಅಂತರ ತ್ವರಿತಗತಿಯಲ್ಲಿ ಹೆಚ್ಚುತ್ತಿದೆ. ವಿಶ್ವದ ಪ್ರತಿಷ್ಠಿತ ದಿನಪತ್ರಿಕೆ ನ್ಯೂ ಯಾರ್ಕ ಟೈಮ್ಸ್(ಮೇ 5,2012)ರಲ್ಲಿ ಪ್ರಕಟವಾದ, 'ಯುರೋಪ ಹಾಗಿರಲಿ, ಭಾರತದ ಕುರಿತು ಚಿಂತಿಸಿ', ಎಂಬ ಶೀರ್ಷಿಕೆಯಡಿ ಪ್ರಕಟವಾಗಿತ್ತು ಮತ್ತು ಅದರಲ್ಲಿ ಭಾರತೀಯ ಅರ್ಥವ್ಯವಸ್ಥೆ ಕುರಿತು ಹೀಗೆ ಬರೆಯಲಾಗಿತ್ತು, "ವೃದ್ಧಿ ದರದಲ್ಲಿ ಆಗಿರುವ ಇಳಿಕೆ ಸಮಾನವಾಗಿರದೆ, ಬಡವರ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ. ಹೋಲಿಕೆಯಲ್ಲಿ ಯೂರೋ ಪ್ರದೇಶದ ಸಮಸ್ಯೆ ಲೆಖ್ಖಕ್ಕೆಬಾರದು".

**ಬಡವರು ಮತ್ತು ಬಲ್ಲಿದರ ನಡುವೆ ಹೆಚ್ಚುತ್ತಿರುವ ಅಂತರವನ್ನು ನ್ಯೂಯಾರ್ಕ್‌ನಲ್ಲಿ ಕೂತವರಿಗೆ ಕಾಣಿಸುತ್ತಿದೆ ಆದರೆ ನವದೆಹಲಿಯಲ್ಲಿ ಇದ್ದವರು ಇದನ್ನು ಕಾಣದಂತಾಗಿದ್ದಾರೆ**. ಭಾರತ ಸರ್ಕಾರವು 32 ರೂಪಾಯಿ ಮತ್ತು 26 ರೂಪಾಯಿ ಆಧಾರದ ಮೇಲೆ ಬಡತನ ರೇಖೆಯ ಅಂಕಿ–ಅಂಶಗಳನ್ನು ಮುಚ್ಚಿಡುವ ಪ್ರಯತ್ನ ನಡೆಸಿದೆ. ಬಡತನ ನಿರ್ಮೂಲನೆ ಕಾರ್ಯವನ್ನು ಸೂಕ್ಷ್ಮ ಸಂವೇದನೆಯೊಂದಿಗೆ ಮಾಡಬೇಕೆ ಹೊರತು ಅಂಕಿ–ಅಂಶದ ಆಧಾರದ ಮೇಲಲ್ಲ ಎಂದು ಸರ್ಕಾರ ನಡೆಸುತ್ತಿರುವ ನಾಯಕರಿಗೆ ಹೇಳಬಯಸುತ್ತೇನೆ. **ಬಡತನದ ನೋವನ್ನು ಬಡವರ ಕಣ್ಣಿನ ಮೂಲಕ ಅರ್ಥ ಮಾಡಿಕೊಳ್ಳಬೇಕೆ ಹೊರತು ಅಂಕಿ–ಅಂಶಗಳ ಮೂಲಕವಲ್ಲ**.

ಹಣಕಾಸು ಸಚಿವಾಲಯದ ಉನ್ನತಾಧಿಕಾರದ ಸಮಿತಿಯ ವಿಶ್ಲೇಷಣೆಯಂತೆ ಶೇಕಡ 98ರಷ್ಟು ಕೈಗಾರಿಕೆಗಳು ಅಸಂಘಟಿತ ಕ್ಷೇತ್ರದಲ್ಲಿದೆ. ಆದರೆ ಇಂತಹ ಬೃಹತ್ ವಲಯಕ್ಕೆ ನೀಡಲಾಗುವ ಬ್ಯಾಂಕ್ ಸಾಲ ಸೌಲಭ್ಯ ಕೇವಲ ಶೇಕಡ 1.4ರಷ್ಟು ಮಾತ್ರ. ಆರ್ಥಿಕ ವ್ಯವಸ್ಥೆಯ ಹಿಂದಿನ ಆಲೋಚನೆ ಹೇಗಿರಬೇಕೆಂದರೆ, ಅಭಿವೃದ್ಧಿಯ ದೀವಿಗೆ ಕೇವಲ ಬಹು ರಾಷ್ಟ್ರೀಯ ಕಂಪನಿಗಳ ಅಂಗಳದಲ್ಲಿ ಬೆಳಕು ಚೆಲ್ಲದೆ, ಗ್ರಾಮೀಣ ಭಾಗದಲ್ಲಿ ರೈತರು, ರಸ್ತೆಯಲ್ಲಿ ಜೀವಿಸುವ ರಿಕ್ಷಾ ಚಾಲಕರು, ಧಾಬಾಗಳಲ್ಲಿ ದುಡಿಯುವ ಕಾರ್ಮಿಕರ ಜೀವನದ ಮೇಲು ಈ ಬೆಳಕು ಹರಡಬೇಕಿದೆ.

ಪ್ರಸ್ತುತ ಸರ್ಕಾರದ ಆರ್ಥಿಕ ನೀತಿಯು ಗ್ರಹಣಶಕ್ತಿಯಿಲ್ಲದೆ, ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಬಹುಸಂಖ್ಯೆ ಕುರಿತು ದಿವ್ಯ ನಿರ್ಲಕ್ಷ್ಯ ತೋರಿದೆ. ಸರಾಸರಿ ಪ್ರತಿ 12 ತಾಸಿಗೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಕೃಷಿ ಮೇಲೆ ಅವಲಂಬಿತ ಶೇಕಡ 70ರಷ್ಟು ದೇಶದ ಜನಸಂಖ್ಯೆ ಕರುಣಾಜನಕ ಸ್ಥಿತಿಯಲ್ಲಿದೆ. ಸಾಲ ಮನ್ನಾ

ಯೋಜನೆಯಲ್ಲೇ ದಾಂಧಲೆ ಮಾಡಿರುವ ಈ ಸರ್ಕಾರ ಕಡೆಗಣನೆಯ ಪರಕಾಷ್ಠತೆಯ ಖಂಡನೀಯ ಉದಾಹರಣೆ ನೀಡಿದೆ.

ನಮ್ಮ ದೇಶದಲ್ಲಿ ಶೇಕಡ 58ರಷ್ಟು ರೈತರು ಬಡತನ ರೇಖೆಗಿಂತ ಕೆಳಗೆ ಜೀವನ ನಡೆಸುತ್ತಿದ್ದಾರೆ. ಯುರೋಪಿನ ಒಕ್ಕೂಟ ಮತ್ತು ಅಮೇರಿಕ ತನ್ನ ರೈತರಿಗೆ ಭಾರಿ ವಿನಾಯತಿಗಳನ್ನು ನೀಡುತ್ತದೆ, ಆದರೆ ನಮ್ಮದು ಕೃಷಿ ಪ್ರಧಾನ ರಾಷ್ಟ್ರವಾಗಿದ್ದರೂ, ಕೃಷಿ ಕ್ಷೇತ್ರ ಲಾಭದಾಯಕವಲ್ಲವೆಂಬ ನಂಬಿಕೆಯೊಂದಿಗೆ ಆರ್ಥಿಕ ನೀತಿಯನ್ನು ಅನುಸರಿಸುತ್ತಿದ್ದು, ಜನರು ಬೇರೆ ವೃತ್ತಿ ಆರಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಕಳೆದ ಒಂದು ದಶಕದಲ್ಲಿ ತಲಾ ಒಬ್ಬರ ಕೃಷಿ ಉತ್ಪಾದನೆಯು ಸರಾಸರಿ ವೃದ್ಧಿ ದರದ ಶೇಕಡ ಒಂದರ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಕಳೆದ 30 ವರ್ಷಗಳಲ್ಲಿ ವ್ಯವಸಾಯ ಯೋಗ್ಯ ಜಮೀನು ಒಂದೇ ಒಂದು ಇಂಚು ಹೆಚ್ಚದೆ 1250 ಲಕ್ಷ ಹೆಕ್ಟೇರ್‌ಗೆ ಸೀಮಿತಗೊಂಡಿದೆ. ಆದರೂ ಸಹ ಬಹುಪಾಲು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. 2011ರಲ್ಲಿ ಶೇಕಡ 45.5ರಷ್ಟು ದುಡಿಯುವ ಕೈಗಳು ಕೃಷಿ ಕಾರ್ಯದಲ್ಲಿ ತೊಡಗಿದ್ದವು.

ಕಳೆದ 30 ವರ್ಷಗಳಿಂದ ನಮ್ಮ ಸರಾಸರಿ ವಾರ್ಷಿಕ ಕೃಷಿ ಉತ್ಪಾದನೆ ಶೇಕಡ ಒಕ್ಕೆ ಸೀಮಿತವಾಗಿದ್ದು, ವಿಶ್ವದ ಅನ್ಯ ರಾಷ್ಟ್ರಗಳ ಹೋಲಿಕೆಯಲ್ಲಿ ಇದು ಅತ್ಯಲ್ಪದ್ದಾಗಿದೆ. ಉದಾಹರಣೆಗೆ 2010ರಲ್ಲಿ ಆಸ್ಟ್ರೇಲಿಯ ಒಂದು ಹೆಕ್ಟೇರ್‌ನಲ್ಲಿ 10.8 ಟನ್ ಅಕ್ಕಿ ಉತ್ಪಾದಿಸಿದ್ದು, ಭಾರತದ ಶೇಕಡ 3.3 ಉತ್ಪಾದನೆ ದಾಖಲೆಯನ್ನು ಮೂರು ಪಟ್ಟು ಮೀರಿಸಿದೆ.

**13ರಿಂದ 35 ವರ್ಷ ವಯೋಮಿತಿಯ ಶೇಕಡ 40ರಷ್ಟು ಜನಸಂಖ್ಯೆಯ ಎರಡನೆ ಮೂರು ಭಾಗ ಹಳ್ಳಿಗಳಲ್ಲಿ ವಾಸಿಸುತ್ತದೆ. ಆದ್ದರಿಂದ ಯುವ ಭಾರತದ ಅಭಿವೃದ್ಧಿಯ ನಮ್ಮ ಸಂಕಲ್ಪವು ಎರಡನೆ ಮೂರು ಭಾಗದಷ್ಟು ಯುವಕರನ್ನು ಸಂಪೂರ್ಣವಾಗಿ ಕಡೆಗಣಿಸುವ ಮೂಲಕ ಈಡೇರದು.**

ಭಾರತವು ವಿಶ್ವದಲ್ಲೇ ಅತಿ ವಿಶಾಲವಾದ, ಫಲವತ್ತಾದ ಮತ್ತು ಅತಿಹೆಚ್ಚಿನ ಜನಸಂಖ್ಯಾ ಸಾಂದ್ರತೆಯುಳ್ಳ ಸಮತಟ್ಟು ಪ್ರದೇಶವನ್ನು ಹೊಂದಿದೆ. ಆದ್ದರಿಂದಲೇ ನಮ್ಮ ಆರ್ಥಿಕ ನೀತಿಯನ್ನು ಈ ನೈಸರ್ಗಿಕ ಕ್ಷಮತೆಯನ್ನು ಮನಗಂಡು ರೂಪಿಸುವ ಅಗತ್ಯವಿದೆ.

ಆರ್ಥಿಕ ಅಭಿವೃದ್ಧಿಯ ವೃದ್ಧಿ ದರ ಎಷ್ಟೇ ವೇಗವಾಗಿದ್ದರು, ವಿಶ್ವದ ಅತ್ಯಾವಶ್ಯಕ ಆವಶ್ಯಕತೆಯೆಂದರೆ ಆಹಾರ ಧಾನ್ಯಗಳು. ವಿಶ್ವದ ಪ್ರಮುಖ ಆಹಾರ ಧಾನ್ಯ ಉತ್ಪಾದನಾ ಕೇಂದ್ರವಾಗುವ ಸಾಮರ್ಥ್ಯ ಭಾರತಕ್ಕಿದೆ. 21ನೇ ಶತಮಾನದಲ್ಲಿ ವಿಶ್ವದ ಅಗ್ರಮಾನ್ಯ ರಾಷ್ಟ್ರವಾಗಿ ಭಾರತ ರೂಪುಗೊಳ್ಳಬೇಕಾದರೆ, ಭಾರತವನ್ನು ಕೇವಲ ಉತ್ಪಾದನಾ, ಆರ್ಥಿಕ ಅಥವಾ ಭೌತಿಕ ರಾಜಧಾನಿಯಾಗಿ ಮಾರ್ಪಡಿಸಿದರೆ ಸಾಲದು, ಇಂತಹ ಸಾಮರ್ಥ್ಯವನ್ನು ಅನ್ಯ ಹಲವು ರಾಷ್ಟ್ರಗಳೂ ಹೊಂದಿವೆ. ಆದರೆ ಭಾರತವು ಈ ಎಲ್ಲಾ ಸಾಮರ್ಥ್ಯಗಳ ಜೊತೆಗೆ ಕೃಷಿ ವಲಯದ ಅಗ್ರಮಾನ್ಯ ರಾಷ್ಟ್ರವಾಗುವ ಆವಶ್ಯಕತೆಯಿದೆ. ಇದಕ್ಕೆ ಕಾರಣವೆಂದರೆ, ಭಾರತ ಸಾಂಪ್ರದಾಯಿಕವಾಗಿ ಭೌಗೋಳಿಕ, ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಹೊಂದಿದ ರಾಷ್ಟ್ರವಾಗಿದೆ.

**ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಪಕ್ಷದಲ್ಲಿ, ಭಾರತವನ್ನು 21ನೇ ಶತಮಾನದ ಭೌತಿಕ ರಾಜಧಾನಿಯ ಜೊತೆಗೆ ಕೃಷಿ ರಾಜಧಾನಿಯನ್ನಾಗಿಯೂ ಮಾರ್ಪಡಿಸುವ ಪಣ ತೊಟ್ಟಿದ್ದೇವೆ.**

ನಮ್ಮ ಕೆಲಸದಲ್ಲಿ ಇದು ಪ್ರತಿಬಿಂಬಿಸಿದೆ. ನಮ್ಮ ರಾಜ್ಯ ಸರ್ಕಾರಗಳು ಕೃಷಿ ಕ್ಷೇತ್ರದಲ್ಲಿ ಅದ್ಭುತ ಕಾರ್ಯ ಮಾಡಿ ತೋರಿವೆ. ಗುಜರಾತಿನಲ್ಲಿ ಪ್ರತಿಯೊಬ್ಬ ರೈತನೂ ಮಣ್ಣಿನ ಗುಣಮಟ್ಟ ತೋರಿಸಬಲ್ಲ ಪತ್ರವನ್ನು ಹೊಂದಿದ್ದು, ಅಂತರ್‌ಜಲ ಮಟ್ಟ ಸುಧಾರಣೆಯಾದ ಏಕೈಕ ರಾಜ್ಯ ಅದಾಗಿದೆ ಮತ್ತು ಪ್ರತಿಯೊಬ್ಬ ರೈತರಿಗು ಮಣ್ಣಿನ ಫಲವತ್ತತೆ ಕಾರ್ಡ್ ನೀಡಿದ ಹೆಗ್ಗಳಿಕೆಗೂ ಪಾತ್ರವಾಗಿದೆ. ಮಧ್ಯ ಪ್ರದೇಶದಲ್ಲಿ ಕೃಷಿ ವೃದ್ಧಿ ದರ ದಾಖಲೆಯ ಶೇಕಡ 18.96 ಮಟ್ಟವನ್ನು ತಲುಪಿದೆ. ಕರ್ನಾಟಕ ಮತ್ತು ನಂತರ ಮಧ್ಯಪ್ರದೇಶ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆ ಮಾಡಿವೆ. ಇದಲ್ಲದೆ ಕೃಷಿ ಹಾಗೂ ಇತರೆ ವಲಯಗಳಲ್ಲಿ ನಮ್ಮ ಗುಜರಾತ್, ಮಧ್ಯಪ್ರದೇಶ, ಚತ್ತೀಸ್‌ಘಡ್ ಹಾಗೂ ಕರ್ನಾಟಕದ ಸರ್ಕಾರಗಳು ತೆಗೆದುಕೊಂಡ ಉಪಕ್ರಮಗಳ ಕುರಿತು ನಮ್ಮ ಆಯಾ ರಾಜ್ಯದ ಮುಖ್ಯಮಂತ್ರಿಗಳು ತಿಳಿಸುತ್ತಾರೆ.

ಸ್ನೇಹಿತರೆ, ಈ ದೇಶದ ಕೃಷಿ ಸಚಿವನಾಗಿ ಕಾರ್ಯವಹಿಸುವ ಸೌಭಾಗ್ಯ ದೊರೆತಿಸತ್ತು. ಆಗ ರೈತರ ಬವಣೆಯನ್ನು ಸಮೀಪದಿಂದ ನೋಡುವ ಅವಕಾಶ ಲಭಿಸಿತ್ತು. ಅಧಿಕಾರಕ್ಕೆ ಬರುವ ಅವಕಾಶ ಲಭಿಸಿದರೆ ಕೆಳಕಂಡ ಕಾರ್ಯಗಳನ್ನು ಯತ್ನಿಸಲಿದ್ದೇವೆ.

- ಕೇವಲ ಕನಿಷ್ಠ ಬೆಂಬಲ ಬೆಲೆ ನೀಡದೆ, ರೈತರ ವರಮಾನದ ವೀಮೆ ಮಾಡುವ ಅಗತ್ಯವಿದೆ. ನಾವು ಅಧಿಕಾರಕ್ಕೆ ಬಂದರೆ 'ಕೃಷಿ ವರಮಾನ ವೀಮೆ ಯೋಜನೆ'ಯನ್ನು ಜಾರಿಗೆ ತರುತ್ತೇವೆ.
- ಆಹಾರ ಭದ್ರತಾ ಮಸೂದೆಯನ್ನು ಹೆಚ್ಚು ಸಾರ್ಥಕಗೊಳಿಸಿ ಚತ್ತೀಸ್‌ಘಡ್‌ನಲ್ಲಿ ಜಾರಿಗೆ ತಂದಿರುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸುಧಾರಿಸುತ್ತೇವೆ.
- ಅಂತರಜಲ ಮಟ್ಟ ಸುಧಾರಣೆ ಮತ್ತು ನೀರಾವರಿ ಸಮಸ್ಯೆಯನ್ನು ಬಗೆಹರಿಸಲು ರಾಷ್ಟ್ರೀಯ ಜಲ ನೀತಿಯನ್ನು ರೂಪಿಸುತ್ತೇವೆ
- ಕೃಷಿ ಸಾಲ ನೀತಿಯನ್ನು ಪುನರ್ ಪರಿಗಣಿಸುತ್ತೇವೆ
- ಹಾಲು ಉತ್ಪಾದನೆ ಮತ್ತು ಹೈನುಗಾರಿಕೆಗೆ ಹೆಚ್ಚಿನ ಒತ್ತು ನೀಡುತ್ತೇವೆ.
- ರಸಾಯನಿಕ ಗೊಬ್ಬರದ ಬಳಕೆಯಿಂದ ಪಂಜಾಬ್ ಮತ್ತು ಹರಿಯಾಣದಲ್ಲಿ ಮಣ್ಣಿನ ಫಲವತ್ತತೆ ಕುಗ್ಗಿರುವುದರಿಂದ, ಅದನ್ನು ಸುಧಾರಿಸಲು ಪೌಷ್ಠಿಕಾಂಶಗಳನ್ನು ರಿಯಾಯಿತಿದರದಲ್ಲಿ ನೀಡುವ ವ್ಯವಸ್ಥೆ ಮಾಡುತ್ತೇವೆ.
- ಹಳ್ಳಿಯ ಮಟ್ಟದಲ್ಲಿ ವಿದ್ಯುತ್ ಮತ್ತು ನೀರು ಪೂರೈಸಲು ಸೌರ ಶಕ್ತಿ, ವಾಯು ಶಕ್ತಿ ಹಾಗೂ ಬಯೋಗ್ಯಾಸ್ ಬಳಕೆಯನ್ನು ಪ್ರೋತ್ಸಾಹಿಸುವ ಕೋಢಿಕೃತ ನೀತಿಯನ್ನು ಜಾರಿಗೆ ತರುತ್ತೇವೆ.
- ಸಾಧ್ಯವಾದ ಮಟ್ಟಕ್ಕೆ ಕೃಷಿ ಕ್ಷೇತ್ರದಲ್ಲಿ ಸಾವಯವ ಕೃಷಿ ಪದ್ದತಿಯನ್ನು ಪ್ರೋತ್ಸಾಹಿಸುತ್ತೇವೆ. ಅಕ್ಕಿ ಹಾಗೂ ಗೋದಿಯ ಉತ್ಪಾದನೆಗೆ ಸ್ವದೇಶಿ ತಂತ್ರಜ್ಞಾನಗಳಾದ 'ಸಿಸ್‌ಟಂ ಆಫ್ ರೈಸ್ ಇನ್‌ಟೆನ್‌ಸಿಫಿಕೇಶನ್(ಎಸ್‌ಆರ್‌ಐ) ಹಾಗೂ 'ಸಿಸ್‌ಟಂ ಆಫ್ ವೀಟ್ ಇನ್‌ಟೆನ್‌ಸಿಫಿಕೇಶನ್(ಎಸ್‌ಡಬ್ಲ್ಯುಐ) ಜಾರಿಗೆ ತರುವ ಮೂಲಕ ಕಡಿಮೆ ಜಲ ಹಾಗೂ ಸಾವಯವ ಗೊಬ್ಬರದ ನೆರವಿನಿಂದ ಕುಲಾಂತರಿ ತಳಿಗಳನ್ನು ಬಳಸದೆ ವ್ಯವಸಾಯ ಮಾಡಬಹುದಾಗಿದೆ. ಪ್ರಾಥಮಿಕ ಪ್ರಯೋಗಗಳು ಪ್ರೋತ್ಸಾಹದಾಯಕವಾಗಿದೆ.

**ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು**

ಎರಡು ತಿಂಗಳುಗಳ ಹಿಂದೆ ಡಿಸೆಂಬರ್‌ನಲ್ಲಿ ದೇಶದ ರಾಜಧಾನಿ ದೆಹಲಿಯಲ್ಲಿ ಓರ್ವ ಮಹಿಳೆಯ ವಿರುದ್ಧ ಘೋರ ಅತ್ಯಾಚಾರ ನಡೆದ ಘಟನೆ ಇಡೀ ರಾಷ್ಟ್ರದ ಸಂವೇದನೆಯನ್ನು ಕದಡಿತು. ಕೇಂದ್ರ ಸರ್ಕಾರ ನಿಯೋಜಿಸಿದ ನ್ಯಾಯಮೂರ್ತಿ ಜೆ.ಎಸ್.ವರ್ಮಾ ಸಮಿತಿ ವರದಿ ಆಧರಿಸಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ. ಇದರ ಚರ್ಚೆ ಸಂಸತ್‌ನಲ್ಲಿ ಆಗಬೇಕಿದೆ.

ಅತ್ಯಾಚಾರ ಅಥವಾ ಜೀವನಾಪರ್ಯಂತ ಅಂಗವೈಕಲ್ಯ ಹೊಂದಿದ ಸಂದರ್ಭದಲ್ಲಿ ಅಥವಾ ದೇಹಿಕ ಸ್ವರೂಪವನ್ನು ವಿಕಾರಗೊಳಿಸುವ ಎಸಿಡ್ ಎರಚುವ ಅಪರಾಧಗಳಲ್ಲಿ ಅಪಚಾರಕ್ಕೆ ಒಳಗಾದ ವ್ಯಕ್ತಿ ಸಾವನಪ್ಪಿದರೆ, ಅಂತಃ ಅಪರಾಧಿಗೆ ಮರಣದಂಡನೆ ವಿಧಿಸಬೇಕು ಎಂಬ ಅಭಿಪ್ರಾಯ ಭಾಜಪ ಹೊಂದಿದೆ.

ಬಲವಾದ ಕಾನೂನು ರೂಪಿಸುವುದರಿಂದಲೇ ಮಹಿಳೆಯರ ವಿರುದ್ಧದ ಅಪರಾಧಗಳು ನಿಲ್ಲುವುದಿಲ್ಲ. ಇದಕ್ಕಾಗಿ ಹಲವಾರು ಹಂತಗಳಲ್ಲಿ ಕಾರ್ಯ ಸಾಧಿಸುವ ಅಗತ್ಯವಿದೆ. ಮೊದಲನೆಯದಾಗಿ, ಪೋಲಿಸ್ ಮತ್ತು ಆಡಳಿತ ವರ್ಗದಲ್ಲಿ ಸಕ್ರಿಯತೆ ಹಾಗೂ ಸಂವೇದನೆ ಹೆಚ್ಚಿಸುವ ಅಗತ್ಯವಿದೆ. ಎರಡನೆಯದಾಗಿ, ಸಮಾಜದಲ್ಲಿ ಪ್ರಚಾರ ಆದೋಳನವನ್ನು ಮಹಿಳೆಯರ ಪಾಲುಗಾರಿಕೆಯೊಂದಿಗೆ ಏರ್ಪಡಿಸುವ ಅಗತ್ಯವಿದೆ. ಮೂರನೆಯದಾಗಿ, ಸಂಸ್ಕಾರ ಹೆಚ್ಚಿಸಲು ನೀತಿ ಶಿಕ್ಷಣ ಮತ್ತು ತರಬೇತಿ ಆಯೋಜಿಸುವುದು ಆವಶ್ಯಕವಾಗಿದೆ.

**ಯುವಕರು**

ಭಾರತ ಇಂದು ವಿಶ್ವದ ತರುಣ ರಾಷ್ಟ್ರವಾಗಿದೆ. ವಿಶ್ವಾದಲ್ಲೇ ಅತಿ ಹೆಚ್ಚಿನ ಯುವಕರು ಭಾರತೀಯರಾಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಾಧನೆಗಳನ್ನು ಭಾರತದ ಯುವಕರು ಮಾಡಿದ್ದಾರೆ. ಸಾಫ್ಟ್‌ವೇರ್ ರಂಗದಲ್ಲಿ ನಮ್ಮ ಯುವಕರು ತಮ್ಮದೆಯಾದ ಛಾಪು ಮೂಡಿಸಿದ್ದಾರೆ.

ಆದರೆ ಮತ್ತೊಂದು ವಸ್ತುಸ್ಥಿತಿಯೆಂದರೆ, ಎರಡನೆ ಮೂರರಷ್ಟು ಯುವಕರು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಬಡತನ, ನಿರುದ್ಯೋಗದ ಸಮಸ್ಯೆಯನ್ನು ನಮ್ಮ ಈ ಯುವಕರು ಜಾರ್ಖಂಡ್, ಛತ್ತೀಸ್‌ಘಡ್, ಒಡಿಶಾ, ಆಂಧ್ರಪ್ರದೇಶ,ಬೆಂಗಾಲ್ ಹಾಗೂ ಬಿಹಾರನ ಹಿಂದುಳಿದ ಪ್ರದೇಶಗಳಲ್ಲಿ ಅನುಭವಿಸುತ್ತಿದ್ದು, ಇವರಲ್ಲಿ ಹಲವರು ನಕ್ಸಲೀಯರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.

ಈ ವಿಚಾರವನ್ನು ಹೇಳುವ ಉದ್ದೇಶವೆಂದರೆ, ಭಾರತದ ಯುವಕರು ವಿವಿಧ ಬಗೆಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಆದರೆ ಎಲ್ಲಕ್ಕಿಂತ ಮಿಗಿಲಾದ ಸಮಸ್ಯೆಯೆಂದರೆ ಅದು ನಿರುದ್ಯೋಗ. ಇದರ ದುರಪಯೋಗ ಪಡೆದುಕೊಂಡು, ಕೆಲವು ಸಮಾಜ ಘಾತುಕ ಶಕ್ತಿಗಳು ಇವರನ್ನು ಅಪರಾಧ ಹಾಗೂ ಆತಂಕವಾದದ ದಾರಿಗೆ ಸೆಳೆಯುವುದು ಸುಲಭವಾಗಿದೆ.

ಎನ್‌ಡಿಎ ಸರ್ಕಾರವಿದ್ದಾಗ ಉದ್ಯೋಗ ಸೃಷ್ಟಿಗೆ ಪ್ರಥಮ ಆಧ್ಯತೆ ನೀಡಲಾಗಿತ್ತು. ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತಿ ಹೆಚ್ಚಿನ ಉದ್ಯೋಗ ಅವಕಾಶವನ್ನು ಕಲ್ಪಿಸುವ ದಾಖಲೆಯಿದೆ. ಆದರೆ ಇಂದು ಯುಪಿಎ ಸರ್ಕಾರದ ತಪ್ಪು ಆರ್ಥಿಕ ನೀತಿಗಳಿಂದಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಿಸಿದೆ. ವೃದ್ಧಿದರ ಶೇಕಡ 5ರ ಕನಿಷ್ಠ ಮಟ್ಟದಲ್ಲಿದ್ದರೆ, ಕೋಟಿ–ಕೋಟಿ ಯುವಕರು ನಿರುದ್ಯೋಗ ಅನುಭವಿಸುವ ಭೀತಿ ಎದುರಾಗಿದೆ.

ಇಂದಿನ ಯುವಕರ ಕುರಿತು ಎದ್ದಿರುವ ಮತ್ತೊಂದು ದೋಶವೆಂದರೆ, ಮಾಸುತ್ತಿರುವ ನೈತಿಕ ಮೌಲ್ಯಗಳು. ದೆಹಲಿ ಸಮೂಹ ಅತ್ಯಾಚಾರ ಪ್ರಕರಣವು ಒಂದು ರೀತಿ ಈ ಭೀತಿಯನ್ನೇ ಹುಟ್ಟಿಸಿದೆ. ಸಮಾಜ ಹಾಗೂ ಸರ್ಕಾರ ಎರಡೂ ಸೇರಿ ಯುವಕರನ್ನು ಭಾರತೀಯತೆ ಮತ್ತು ನೈತಿಕ ಮೌಲ್ಯಗಳತ್ತ ಸೆಳೆಯಬೇಕಾಗಿದೆ.

**ಭಾರತದಲ್ಲಿ ನಿರಾಶ್ರಿತರು**

ಕಳೆದ ಕೆಲವು ದಿವಸಗಳಿಂದ ಪಾಕಿಸ್ತಾನದ ಹಲವಾರು ಅಲ್ಪಸಂಖ್ಯಾತ ಕುಟುಂಬಗಳು ಭಾರತದಲ್ಲಿ ಆಶ್ರಯ ಪಡೆದಿವೆ. ದೇಶದಲ್ಲಿ ನಿರಾಶ್ರಿತರ ಪರಿಹಾರ ಮತ್ತು ಪುನರ್ವಸತಿಯ ಸ್ಪಷ್ಟ ನೀತಿಯಿಲ್ಲದ ಕಾರಣ, ಭಾರತಕ್ಕೆ ಆಶ್ರಯ ಬೇಡಿ ಬರುವ ನಿರಾಶ್ರಿತರು ಅನಿಶ್ಚಿತತೆಯ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ.

**ಅಕ್ರಮವಾಗಿ ದೇಶದೊಳಗೆ ನುಗ್ಗುವವರಿಗೂ ಮತ್ತು ಆಶ್ರಯ ಬೇಡಿ ಬರುವವರಿಗು ನಡುವೆ ಸ್ಪಷ್ಟ ಅಂತರವನ್ನು ಮಾಡುವ ಸೂಕ್ತ ನಿರಾಶ್ರಿತರ ನೀತಿಯನ್ನು ರೂಪಿಸಬೇಕಿದೆ. ಪುರಾತನ ಕಾಲದಿಂದಲೂ ಭಾರತ ಕಿರುಕುಳಕ್ಕೆ ಒಳಗಾದವರಿಗೆ ಆಶ್ರಯ ನೀಡುತ್ತಾ ಬಂದಿದೆ. ಆದರೆ ಅದರ ನೆಪದಲ್ಲಿ ಅಕ್ರಮವಾಗಿ ನುಸುಳುವವರಿಗೆ ಆಶ್ರಯ ನೀಡಲಾಗದು. ಸ್ಪಷ್ಟ ಹಾಗೂ ವಿಶೇಷ ನಿರಾಶ್ರಿತರ ಪುನರ್ವಸತಿ ನೀತಿಯನ್ನು ನಿಜವಾದ ನಿರಾಶ್ರಿತರಿಗೆ ಹಾಗೂ ಕಿರುಕುಳಕ್ಕೆ ಒಳಗಾದವರಿಗೆ ರೂಪಿಸಬೇಕಾಗಿದೆ. ನಮಗೆ ಸರ್ಕಾರ ಮಾಡುವ ಅವಕಾಶ ದೊರೆತರೆ, ನಾವು ತರ್ಕಸಮ್ಮತ ನೀತಿಯನ್ನು ರೂಪಿಸುತ್ತೇವೆ.**

**ಜಮ್ಮು ಹಾಗೂ ಕಾಶ್ಮೀರ**

ಪಂಚಾಯತ್ ಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಅದುಮುವ ಪ್ರಯತ್ನವನ್ನು ಭಯೋತ್ಪಾದನಾ ಸಮೂಹಗಳು ಮಾಡುತ್ತಿರುವುದನ್ನು ನಾವು ಖಂಡಿಸುತ್ತೇವೆ. ಪಂಚಾಯತ್‌ಗಳಿಗೆ ಆರ್ಥಿಕ ನೆರವು ನೀಡುವಲ್ಲಿ ಹಿಂದು–ಮುಂದು ನೋಡುತ್ತಿರುವ ಜಮ್ಮು ಹಾಗೂ ಕಾಶ್ಮೀರ ಸರ್ಕಾರ, ಸರಪಂಚರ ರಕ್ಷಣೆಯಲ್ಲೂ ವಿಫಲವಾಗಿದೆ. ಕಳೆದ ಒಂದು ವರ್ಷದಲ್ಲಿ ಭಯೋತ್ಪಾದನಾ ಸಮೂಹಗಳು ಹಲವಾರು ಸರಪಂಚರನ್ನು ಕೊಲೆ ಮಾಡಿದ್ದು ತಮ್ಮ ಹುದ್ದೆಗಳಿಂದ ರಾಜಿನಾಮೆ ನೀಡುವ ಸಾರ್ವಜನಿಕ ಎಚ್ಚರಿಕೆ ನೀಡಿವೆ. ಭಯೋತ್ಪಾದಕರ ಭಯದಿಂದ ನೂರಾರು ಸರಪಂಚರು ಸಾಮೂಹಿಕ ರಾಜಿನಾಮೆ ನೀಡಿದ್ದಾರೆ. ಸರಪಂಚರು ಸುರಕ್ಷತೆಯನ್ನು ಕೋರುತ್ತಿದ್ದಾರೆ ಆದರೆ ಸರ್ಕಾರ ಅವರ ಕೋರಿಕೆಯನ್ನು ಮನ್ನಿಸುತ್ತಿಲ್ಲ. ಈ ಕುರಿತು ನಾನು ಪ್ರಧಾನಮಂತ್ರಿಗಳಿಗೆ ಪತ್ರಬರೆದಿದ್ದರೂ, ಯುಪಿಎ ಸರ್ಕಾರ ಮೌನ ವಹಿಸಿದೆ.

ಜಮ್ಮು ಹಾಗೂ ಕಾಶ್ಮೀರದ ವಿಧಾನಸಭೆ 111 ಸ್ಥಾನಗಳನ್ನು ಹೊಂದಿದೆ, ಇದರಲ್ಲಿ ಚುನಾವಣೆ ನಡೆಯುವುದು ಕೇವಲ 87 ಸ್ಥಾನಗಳಿಗೆ, ಉಳಿದ 24 ಸ್ಥಾನಗಳು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಕಾರಣ ಅದು ಖಾಲಿಯಿರುತ್ತದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಿಂದ ನಿರಾಶ್ರಿತರಾಗಿ ಬಂದವರನ್ನು ಈ 24 ಸ್ಥಾನಗಳಲ್ಲಿ ನಾಮನಿರ್ದೇಶನಗೊಳಿಸುವ ಅವಕಾಶ ಕಲ್ಪಿಸಬೇಕಿದೆ ಎಂಬ ಆಲೋಚನೆ ನಮ್ಮದು.

**ತೆಲಂಗಾಣ ಹಾಗೂ ಪ್ರತ್ಯೇಕ ರಾಜ್ಯದ ಕೂಗು**

ತೆಲಂಗಾಣ ರಾಜ್ಯದ ಸೃಷ್ಟಿಗಾಗಿ ಹಲವಾರು ವರ್ಷಗಳಿಂದ ಜನಾಂದೋಳನ ನಡೆಯುತ್ತಿದೆ. ಆದರೆ ಯುಪಿಎ ಸರ್ಕಾರ ಈ ಬೇಡಿಕೆಯನ್ನು ಪ್ರಜ್ಞಾಪೂರ್ವಕವಾಗಿಯೇ ಉಪೇಕ್ಷಿಸುತ್ತಿದೆ. ಬದ್ಧತೆಯ ಪ್ರದರ್ಶನ ಮಾಡಿದ ಕೇಂದ್ರ ಗೃಹ ಸಚಿವರು ತೆಲಂಗಾಣ ರಾಜ್ಯದ ನಿರ್ಮಾಣಕ್ಕಾಗಿ ಜನವರಿ 28ರ ಗಡವು ನಿಗದಿಮಾಡಿದ್ದರು. ಆದರೂ ಈ ವರೆಗೂ ತೆಲಂಗಾಣ ರಾಜ್ಯದ ಕನಸು ನನಸಾಗಿಲ್ಲ. ಆಂಧ್ರಪ್ರದೇಶ ಸರ್ಕಾರ ನಕ್ಸಲ ಸಮೂಹಗಳ ಕುರಿತು ಕಠಿಣ ಧೋರಣೆ ಹೊಂದಿಲ್ಲ ಹಾಗೂ ಹೈದರಾಬಾದಿನಲ್ಲಿ ಜಿಹಾದಿ ಪಂಗಡಗಳು ತೆಲಂಗಾಣ ಚಳುವಳಿಯನ್ನು ದಮನ ಮಾಡುವ ಯತ್ನದಲ್ಲಿದೆ. **ತೆಲಂಗಾಣ ಜನರ**

**ಭಾವನೆಗಳು ನಮಗೆ ಅರ್ಥವಾಗುತ್ತದೆ, ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡರೆ, ಈ ಜನರ ಕನಸನ್ನು ತೆಲಂಗಾಣ ರಾಜ್ಯದ ಘೋಷಣೆಯೊಂದಿಗೆ ಈಡೇರಿಸಲಿದೆ.**

**ನಮ್ಮ ಅನ್ಯ ರಾಜ್ಯ ಸರ್ಕಾರಗಳು**

ಯುಪಿಎ ಸರ್ಕಾರದ ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ದೇಶದ ಜನತೆ ಬೇಸತ್ತಿದೆ. ಈ ಒಂದು ಹಿನ್ನಲೆಯಲ್ಲಿ ಅಟಲ್‌ಜಿಯವರ ನೇತೃತ್ವದ ಎನ್‌ಡಿಎ ಸರ್ಕಾರವು ಸ್ವರ್ಣಯುಗದರೀತಿ ಸ್ಮರಣೆಗೆ ಬರುತ್ತದೆ. ಅಭಿವೃದ್ಧಿ ಹಾಗೂ ಉತ್ತಮ ಆಡಳಿತದ ಆ ಸಂಪ್ರದಾಯವನ್ನು ಇಂದು ನಮ್ಮ ರಾಜ್ಯ ಸರ್ಕಾರಗಳು ಮುಂದುವರಿಸಿವೆ.

**ಛತ್ತೀಸ್‌ಘಡ್**

ಸರ್ವಶ್ರೇಷ್ಠ ಆರ್ಥಿಕ ನಿರ್ವಹಣೆಯಿಂದ ರಾಜ್ಯದ ಜಿಡಿಪಿ ಏರುತ್ತಲೇ ಇದೆ. ವೃದ್ಧಿ ದರದಲ್ಲಿ ಛತ್ತೀಸ್‌ಘಡ್ ದೇಶದ ನಾಲ್ಕು ಅಗ್ರಮಾನ್ಯ ರಾಜ್ಯಗಳಲ್ಲಿ ಒಂದಾಗಿದೆ. 2009–10ರಲ್ಲಿ ಛತ್ತೀಸ್‌ಘಡ್ ವೃದ್ದಿ ದರ ಶೇಕಡ 11.49ರಷ್ಟು ದಾಖಲಿಸಿತ್ತು. ಆ ವರ್ಷದಲ್ಲಿ ದಾಖಲಾದ ದೇಶದ ಅತಿ ಹೆಚ್ಚಿನ ವೃದ್ಧಿದರ ಇದಾಗಿತ್ತು. ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ  ಅತ್ಯಧಿಕ ವೃದ್ಧಿದರ ಹೊಂದಿದ ದೇಶದ ಐದು ರಾಜ್ಯಗಳಲ್ಲಿ ಛತ್ತೀಸ್‌ಘಡ್ ಒಂದಾಗಿತ್ತು. ನಮ್ಮ ಸರ್ಕಾರದ ಅಧಿಕಾರಾವಧಿಯಲ್ಲಿ ತಲಾ ಒಬ್ಬರ ವಿದ್ಯುತ್ ಬಳಕೆ ಪ್ರಮಾಣ 350 ಯುನಿಟ್‌ನಿಂದ ವಾರ್ಷಿಕ 1547 ಯುನಿಟ್‌ಗಳಿಗೆ ಏರಿದೆ.

ಆಹಾರ ಭದ್ರತಾ ಕಾಯಿದೆ ಜಾರಿಗೆ ತಂದ ದೇಶದ ಮೊದಲ ರಾಜ್ಯ ಛತ್ತೀಸ್‌ಘಡ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕಾಯಿದೆಯಡಿ ರಾಜ್ಯದ ಶೇಕಡ 90ರಷ್ಟು ಜನಸಂಖ್ಯೆ, ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಪಡೆದುಕೊಂಡಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಛತ್ತೀಸ್‌ಘಡ್ ದೇಶಕ್ಕೇ ಮಾದರಿಯಾಗಿದೆ.

**ಕರ್ನಾಟಕ**

ಸ್ನೇಹಿತರೆ, ಕರ್ನಾಟಕದಲ್ಲಿ ದಕ್ಷಿಣ ಭಾರತದ ಮೊದಲ ಭಾಜಪ ಸರ್ಕಾರ ಸ್ಥಾಪನೆಯಾಯಿತು. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ಭಾಜಪ ಸರ್ಕಾರ ಹಲವಾರು ಅದ್ಭುತ ಕೆಲಸಗಳನ್ನು ಮಾಡಿದೆ. ಐಟಿ ಮತ್ತು ಮೂಲಭೂತಸೌಕರ್ಯದ ಜೊತೆಗೆ, ಕೃಷಿ ಕ್ಷೇತ್ರಗಳಲ್ಲಿ ಕರ್ನಾಟಕ ದೇಶದಲ್ಲೇ ಅತಿ ಹೆಚ್ಚಿನ ವೃದ್ಧಿ ದರವನ್ನು ಸಾಧಿಸಿದೆ. ರೈತರಿಗೆ ಶೇಕಡ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಮತ್ತು ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಮೊದಲ ರಾಜ್ಯ ಕರ್ನಾಟಕವೆನಿಸಿದೆ. ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ ಕರ್ನಾಟಕ ರಾಜ್ಯಕ್ಕೆ 2011ನೇ ಸಾಲಿನ ರಾಷ್ಟ್ರೀಯ ಕೃಷಿ ನಾಯಕತ್ವ ಪ್ರಶಸ್ತಿ ಲಭಿಸಿದೆ.

ಉದ್ಯೋಗ ಯೋಗ್ಯ ಕೌಶಲ್ಯ ಅಭಿವೃದ್ಧಿಗಾಗಿ ಕೌಶಲ್ಯ ಆಯೋಗ ರೂಪಿಸಿದ ಮೊದಲ ರಾಜ್ಯವೆಂದರೆ ಅದು ಕರ್ನಾಟಕ. ಬರುವ ವಿಧಾನ ಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ತನ್ನ ಯಶಸ್ಸಿನ ಆಧಾರದ ಮೇಲೆ ಮತ್ತೊಮ್ಮೆ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ ಎಂಬ ಖಚಿತ ವಿಶ್ವಾಸ ನನ್ನದಾಗಿದೆ.

**ಬಿಹಾರ್**

ಬಿಹಾರಿನಲ್ಲಿ ಎನ್‌ಡಿಎ ಸರ್ಕಾರ ಬಂದೊಡನೆ ಬದಲಾವಣೆಯ ಗಾಳಿ ಎಲ್ಲರ ಗಮನ ಸೆಳೆದಿದೆ. ಬಿಹಾರ್ ಸರ್ಕಾರ ಕೆಲವು ಉತ್ಕೃಷ್ಟ ಕೆಲಸ ಕಾರ್ಯಗಳನ್ನು ಮಾಡಿದೆ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ

ಬಿಹಾರ್ ಗರಿಷ್ಠ ಶೇಕಡ 11.95ರ ವೃದ್ಧಿ ದರವನ್ನು ಸಾಧಿಸಿತು. ಕೃಷಿಗೆ ಸಂಬಂಧಿಸಿದ 18 ಇಲಾಖೆಗಳನ್ನು ಒಗ್ಗೂಡಿಸಿ ಒಂದು ಸಮಗ್ರ ಕೃಷಿ ಸಂಪುಟ ರೂಪಿಸಿದ ಮೊದಲ ರಾಜ್ಯ ಅದಾಗಿದೆ. ಕೃಷಿ ಮಾರ್ಗಸೂಚಿಯನ್ನು ಬಿಹಾರ್ ಮಾಡಿದೆ. ಸಮರ್ಥ ಕೃಷಿ ನೀತಿಯಿಂದಾಗಿ ನಲಂದ ಜಿಲ್ಲೆಯ ರೈತರು ಒಂದು ಹೆಕ್ಟೇರಿಗೆ 22 ಟನ್ ಅಕ್ಕಿಯನ್ನು ಉತ್ಪಾದಿಸಿ ವಿಶ್ವ ದಾಖಲೆ ಮಾಡಿದ್ದಾರೆ. ಈ ಹಿಂದೆ ದಾಖಲೆಯು ಚೀನಾ ಬಳಿಯಿತ್ತು.

**ಪಂಜಾಬ್**

ಪಂಜಾಬಿನ ಎನ್‌ಡಿಎ ಸರ್ಕಾರದ ಅಮೋಘ ಸಾಧನೆಯೆಂದರೆ, ಈ ಹಿಂದೆ ಕಾಂಗ್ರೆಸ್ ಸರ್ಕಾರ ಸೃಷ್ಟಿಸಿದ್ದ ಅತಿ ಕ್ಲಿಷ್ಟ ಕೋಮುವಾದದ ಪರಿಸರದ ಶಮನ. ಸಾಮಾಜಿಕ ಸಾಮರಸ್ಯದ ಜೊತೆಗೆ ಹಲವಾರು ಅನ್ಯ ಅಭಿವೃದ್ಧಿ ಕುರಿತ ಸಾಧನೆಗಳನ್ನು ಪಂಜಾಬ್ ಸರ್ಕಾರ ಮಾಡಿದೆ. ಕೃಷಿ ವಲಯದ ತಮ್ಮ ಮುಂದಾಳತ್ವವನ್ನು ಮುಂದುವರಿಸುತ್ತಾ ಪಂಜಾಬ್ ಸರ್ಕಾರ ಹಲವಾರು ಮೂಲಭೂತಸೌಕರ್ಯ ಮತ್ತು ಕೈಗಾರಿಕ ಅಭಿವೃದ್ಧಿಯ ಯೋಜನೆಗಳಿಗೆ ಚಾಲನೆ ನೀಡಿದೆ. ಪಂಜಾಬಿನ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಎರಡನೆ ಬಾರಿ ಚುನಾವಣೆಯಲ್ಲಿ ಐತಿಹಾಸಿಕ ಜಯ ಸಾಧಿಸಿದ ಮೊದಲ ಒಕ್ಕೂಟ ನಮ್ಮದಾಗಿದೆ.

**ಮಧ್ಯ ಪ್ರದೇಶ**

ಮಧ್ಯ ಪ್ರದೇಶ ಸರ್ಕಾರವೂ ಅಭಿವೃದ್ಧಿಯ ಹೊಸ ಯುಗವನ್ನೇ ಸಾರಿದೆ. ತಲಾವಾರು ವರಮಾನ ಮೂರು ಪಟ್ಟು ಹೆಚ್ಚಿದೆ ಹಾಗೂ ಕೃಷಿ ವೃದ್ಧಿ ದರ ಸರ್ವಕಾಲೀನ ವೃದ್ಧಿ ದರ ದಾಖಲೆಯಾದ ಶೇಕಡ 19ನ್ನು ತಲುಪಿದೆ. 24 ತಾಸುಗಳ ವಿದ್ಯುತ್ ಪೂರೈಸಬಲ್ಲ ಗುಜರಾತ್ ನಂತರದ ಎರಡನೆ ರಾಜ್ಯ ಇದಾಗಿದೆ. ಮಧ್ಯ ಪ್ರದೇಶ ಸರ್ಕಾರದ ಲಾಡ್ಲಿ ಲಕ್ಷ್ಮಿ ಯೋಜನಾ ರಾಷ್ಟ್ರದ ಗಮನ ಸೆಳೆದಿದೆ. ಮಧ್ಯಪ್ರದೇಶ ಸರ್ಕಾರ ಸಾರ್ವಜನಿಕ ಸೇವಾ ಖಾತ್ರಿ ಕಾಯಿದೆಯನ್ನು ಪರಿಚಯಿಸಿದ್ದು, ಸರ್ಕಾರಿ ಸೇವೆಗಳನ್ನು ನಿಶ್ಚಿತ ಸಮಯದಲ್ಲಿ ಖಚಿತವಾಗಿ ನೀಡುವ ಪರಿಪಾಠ ಆರಂಭವಾಗಿದೆ. ಇದರ ಅಡಿ ನೂರಕ್ಕೂ ಹೆಚ್ಚು ಸೇವೆಗಳನ್ನು ಸೇರಿಸಲಾಗಿದೆ. ಇದಕ್ಕೆ ವಿಶ್ವ ಬ್ಯಾಂಕಿನಿಂದ ಪ್ರಶಂಸೆ ಲಭಿಸಿದ್ದು, ಉತ್ತಮ ಆಡಳಿತಕ್ಕಾಗಿ ವಿಶ್ವ ಸಂಸ್ಥೆ ಮಧ್ಯ ಪ್ರದೇಶ ಸರ್ಕಾರಕ್ಕೆ ಪ್ರಶಸ್ತಿ ನೀಡಿದೆ. ಮುಖ್ಯ ಮಂತ್ರಿ ತೀರ್ಥ್ ದರ್ಶನ್ ಯೋಜನಾ ಎಂಬ ಸಾಂಸ್ಕೃತಿಕ ಉಪಕ್ರಮವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ.

**ಗೋವಾ**

ಗೋವಾದ ಭಾಜಪ ಸರ್ಕಾರ ಬೃಹತ್ ಮೂಲಬೂತಸೌಕರ್ಯ ಯೋಜನೆಗಳನ್ನು ಆರಂಭಿಸಿದೆ. ಡೀಸೆಲ್ ಮತ್ತು ಪೆಟ್ರೋಲ್ ಬೆಲೆಗಳನ್ನು ತಗ್ಗಿಸಿದ ಮೊದಲ ರಾಜ್ಯ ಗೋವಾ ಆಗಿದೆ. ಲಾಡ್ಲಿ ಲಕ್ಷ್ಮಿ ಯೋಜನೆ ಮತ್ತು ಗೃಹ ಆಧಾರ ಯೋಜನೆ ಅನ್ವಯ ಮಹಿಳಾ ಸಶಕ್ತೀಕರಣದ ಉತ್ತಮ ಕಾರ್ಯವನ್ನು ಗೋವಾ ಸರ್ಕಾರ ಮಾಡುತ್ತಿದೆ. ಇಲೆಕ್ಟ್ರಾನಿಕ್ ರೇಷನ್ ಕಾರ್ಡನ್ನು ರಾಜ್ಯದ ಎಲ್ಲಾ ಜನರಿಗೂ ವಿತರಿಸಲಾಗಿದೆ. ನವ ಕಾಮಧೇನು ಯೋಜನೆಯಡಿ ಗೋವು ಖರೀದಿಸಲು ಶೇಕಡ 90ರಷ್ಟು ವಿನಾಯತಿಯನ್ನು ಸರ್ಕಾರ ಪ್ರಕಟಿಸಿದೆ. ಮನೋಹರ ಪರಿಕ್ಕರ್ ಅವರ ನೇತೃತ್ವದ ಸರ್ಕಾರ ವಿಧಾನ ಸಭೆಯಲ್ಲಿ ಲೋಕಾಯುಕ್ತ ಮಸೂದೆ ಅಂಗೀಕರಿಸಿದ್ದು ಸ್ವಚ್ಛ ಹಾಗೂ ಪಾರದರ್ಶಕ ಆಡಳಿತ ನೀಡುವ ಭರವಸೆ ನೀಡಿದೆ.

**ಗುಜರಾತ್**

ಗುಜರಾತ್ ಸರ್ಕಾರ ಅಭಿವೃದ್ಧಿಯ ಹೊಸ ಆಯಾಮ ರೂಪಿಸಿದ್ದು, ದೇಶವಿದೇಶಗಳಲ್ಲಿ ಇದರ ಪ್ರಶಂಸೆ ನಡೆದಿದೆ. ಸಮರ್ಥ ಹಾಗೂ ಪಾರದರ್ಶಕ ಆಡಳಿತಕ್ಕೆ ಗುಜರಾತ್ ರಾಜ್ಯ ಮಾದರಿಯಾಗಿದೆ. 24

ತಾಸುಗಳ ವಿದ್ಯುತ್ ಮತ್ತು ಸ್ವಚ್ಛ ನೀರನ್ನು ಪ್ರತಿಯೊಬ್ಬರಿಗು ಪೂರೈಸಬಲ್ಲ ಮೊದಲ ರಾಜ್ಯವೆಂದರೆ ಅದು ಗುಜರಾತ್. ಕಳೆದ ಹನ್ನೊಂದು ವರ್ಷದಿಂದ ಕೃಷಿ ವೃದ್ಧಿ ದರ ಶೇಕಡ 10ರ ಮೇಲಿದೆ. ಎಲ್ಲಾ ರೈತರಿಗೂ ಮಣ್ಣು ಗುಣಮಟ್ಟ ಕಾರ್ಡುಗಳನ್ನು ನೀಡಲಾಗಿದ್ದು, ಚಿರಂಜೀವಿ ಯೋಜನೆ ಅನ್ವಯ ಪ್ರತಿಯೊಬ್ಬ ಗರ್ಭವತಿಯರಿಗೆ ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ.

ಸಮರ್ಥ ಗುಜರಾತ್ ಆಡಳಿತಕ್ಕೆ ಯುರೋಪಿನ ಒಕ್ಕೂಟ, ಬ್ರಿಟನ್ ಹಾಗೂ ಅಮೇರಿಕ ಕಾಂಗ್ರೆಸ್‌ನ ವರದಿಗಳಲ್ಲಿ ಮನ್ನಣೆ ದೊರೆತಿದೆ. ಗುಜರಾತ್ ಭಾಜಪದ ಹೆಮ್ಮೆಯ ಗರಿಯಾಗಿದೆ.

ಆದ ಕಾರಣ ನಮ್ಮ ಎಲ್ಲಾ ರಾಜ್ಯ ಸರ್ಕಾರಗಳು ಉತ್ತಮ ಆಳ್ವಿಕೆಯ ಹೊಸ ದಾಖಲೆಗಳನ್ನು ಸಾಧಿಸಿವೆ.

**ಶ್ರೀ ರಾಮ ಸೇತು**

ರಾಮಸೇತು ಕುರಿತು ಸೇತು ಸಮುದ್ರಂ ಯೋಜನೆಯ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ಸರ್ಕಾರವೇ ನೇಮಿಸಿದ ಆರ್.ಕೆ.ಪಚೌರಿ ಸಮಿತಿ ವರದಿಯನ್ನು ನಿರಸ್ಕರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿದೆ.

ಸೇತು ಸಮುದ್ರಂ ಯೋಜನೆಯು ಆರ್ಥಿಕವಾಗಿ ಮತ್ತು ಜೈವಿಕ ಕಾರಣಗಳಿಂದಾಗಿ ಸೂಕ್ತವಲ್ಲ ಎಂಬ ವರದಿಯನ್ನು ಆರ್.ಕೆ.ಪಚೌರಿ ಸಮಿತಿ ನೀಡಿತ್ತು. ಈ ಸಮಿತಿಯ ಅನಿಸಿಕೆಯೊಂದಿಗೆ, ಅನ್ಯ ತಜ್ಞರು ಸಹ ಈ ಯೋಜನೆಯ ವಿರುದ್ಧ ತಮ್ಮ ಅಭಿಪ್ರಾಯ ಮಂಡಿಸುತ್ತಾ, ಯೋಜನೆಯಿಂದ ಭಾರತದ ಸಮುದ್ರದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳು ನಶಿಸಿಹೋಗಬಹುದು ಎಂದಿದ್ದಾರೆ. ಸುನಾಮಿಯ ಭೀತಿಯೂ ಹೆಚ್ಚಬಹುದು ಎಂದು ಅವರು ಎಚ್ಚರಿಸಿದ್ದಾರೆ. ಈ ಎಲ್ಲಾ ಸಲಹೆಗಳನ್ನು ಕಡೆಗಣಿಸಿದ ಸರ್ಕಾರ ಸೇತು ಹಾಳು ಮಾಡುವ ಯೋಜನೆಗೆ ಕೈಹಾಕಿತ್ತು.

ರಾಮಸೇತು ಭಾರತೀಯ ಸಂಸ್ಕೃತಿ ಹಾಗೂ ಧರ್ಮದ ಪ್ರತೀಕವಾಗಿದ್ದು, ಭಾರತದ ಅಸ್ತಿತ್ವದ ಭಾಗವಾಗಿದೆ. ನಮ್ಮ ಪುರಾತನ ಶಾಸ್ತ್ರಗ್ರಂಥಗಳಲ್ಲಿ ಭಾರತದ ವಿಸ್ತಾರವನ್ನು ಅಸೇತು–ಹಿಮಾಚಲವೆಂದು ವರ್ಣಿಸಲಾಗಿದೆ. ಇದರ ಅರ್ಥ ಭಾರತದ ವಿಸ್ತಾರ ಸೇತು (ರಾಮಸೇತು) ಯಿಂದ ಹಿಮಾಚಲದವರೆಗೂ ಹರಡಿದೆ ಎಂದಾಗಿದೆ. ಸೇತು ಇಲ್ಲದ ಭಾರತ ತನ್ನ ಪುರಾತನ ಗಡಿ ಗುರುತನ್ನೇ ಕಳೆದುಕೊಂಡಂತೆ ಆಗುತ್ತದೆ.

ಭಾರತೀಯ ಸಂಸ್ಕೃತಿಯ ಹಲವಾರು ಕುರುಹುಗಳನ್ನು ನಾಶಮಾಡುವ ಕಾರ್ಯದಲ್ಲಿ ಯುಪಿಎ ಸರ್ಕಾರ ತೊಡಗಿದೆ. ಐದು ವರ್ಷಗಳ ಹಿಂದೆ ಸರ್ವೋಚ್ಚ ನ್ಯಾಯಾಲಯಕ್ಕೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ರಾಮ ಐತಿಹಾಸಿಕ ಪಾತ್ರನಲ್ಲ ಎಂದು ತಿಳಿಸುವ ದುರಾದೃಷ್ಟಕರ ಹಾಗೂ ಹಾಸ್ಯಾಸ್ಪದ ಕೆಲಸಕ್ಕೆ ಕೈಹಾಕಿತ್ತು. ನಂತರ ಸಾರ್ವಜನಿಕ ಪ್ರತಿರೋಧಕ್ಕೆ ಮಣಿದು ಸರ್ಕಾರ ಅದನ್ನು ಹಿಂದಕ್ಕೆ ಪಡೆಯಿತು. ಇಂತಹ ಅನಗತ್ಯ ಪ್ರಶ್ನೆಗಳನ್ನು ಶ್ರೀ ರಾಮ ಜನಮ್ ಭೂಮಿ ಕುರಿತೂ ಸಹ ಕೇಳಲಾಗುತ್ತದೆ. **ವಿಪರ್ಯಾಸವೆಂದರೆ ರಾಮನ ದೇಶದಲ್ಲಿ ರಾಜ್ಯಭಾರ ಮಾಡುತ್ತಿರುವ ಸರ್ಕಾರ ರಾಮನ ಇರುವಿಕೆಯ ಕುರಿತು ಸಂದೇಹ ವ್ಯಕ್ತಪಡಿಸಿದ್ದರೆ, ರಾವಣನ ರಾಜ್ಯವಾದ ಶ್ರೀಲಂಕಾ ದೇಶವು ಭಗವಂತ ರಾಮನನ್ನು ಐತಿಹಾಸಿಕ ಅವತಾರಪುರುಷನೆಂದು ಅಧಿಕೃತವಾಗಿ ಘೋಷಿಸಿ, ಆತ ಭೇಟಿ ಇತ್ತ ಜಾಗಗಳನ್ನು ಸಂರಕ್ಷಿಸುವ ಮಹತ್ವದ ಕೆಲಸ ಮಾಡಿದೆ.**

ಭಾರತ ವಿದೇಶಿ ವಸಾಹತುಶಾಹಿಗಳ ಆಳ್ವಿಕೆಗೆ ಒಳಪಟ್ಟ ಅವಧಿಯಲ್ಲೂ ಮತ್ತು ನಂತರ ನೇರ ವಿದೇಶಿಯರ ಆಳ್ವಿಕೆಯಲ್ಲೂ ಶ್ರೀ ರಾಮ ಹಾಗೂ ರಾಮಸೇತು ವಿರುದ್ಧದ ಇಂತಹ ಪ್ರಯತ್ನಗಳು ನಡೆದಿರಲಿಲ್ಲ. **ಆಂಗ್ಲರು**

**ಹಾಗೂ ಔರಂಗಜೇಬನೂ ಯೋಚಿಸಲು ಸಾಧ್ಯವಾದದನ್ನು, ಯುಪಿಎ ಸರ್ಕಾರ ಮಾಡಲು ಪ್ರಯತ್ನಿಸಿದೆ.**

ಸೇತು ಸಮುದ್ರಂ ಯೋಜನೆಯ ಮೇಲೆ 800 ಕೋಟಿ ರೂಪಾಯಿ ಖರ್ಚಾಗಿರುವ ಕಾರಣ ಯೋಜನೆ ಮುಂದುವರಿಯಬೇಕು ಎಂಬ ವಾದವನ್ನು ಸರ್ಕಾರ ಮಾಡುತ್ತಿದೆ. ವ್ಯಾಪಾರಿ ಸರ್ಕಾರದ ಮಟ್ಟಕ್ಕೆ ಈ ಸರ್ಕಾರ ಇಳಿದಿರುವ ಸಂಕೇತಗಳು ಸಿಗುತ್ತಿವೆ. ಹಣಕ್ಕಾಗಿ ಪ್ರಾಮಾಣಿಕತೆ ಹಾಗೂ ಘನತೆಯನ್ನು ದೂಡಿದ ಈ ಸರ್ಕಾರ, ಅದೇ ಹಣಕ್ಕಾಗಿ ಭಗವಂತ ರಾಮನನ್ನು ಮರೆಯುವ ಪ್ರಯತ್ನ ಮಾಡಿದೆ. **ನಾಗರಿಕತೆಯ ವೈಭವದ ಕುರುಹುಗಳನ್ನು ಹಣಕ್ಕಾಗಿ ವಿನಿಮಯ ಮಾಡಲು ಅಸಾಧ್ಯ.**

**ಅಧಿಕಾರಕ್ಕೆ ಬಂದರೆ, ಭಾಜಪ ಪಚೌರಿ ಸಮಿತಿ ಶಿಫಾರಸ್ಸುಗಳನ್ನು ಸ್ವೀಕರಿಸಲಿದೆ ಎಂದು ಸ್ಪಷ್ಟಪಡಿಸಲು ಇಚ್ಛಿಸುತ್ತದೆ. ಸೇತು ಸಮುದ್ರಂ ಯೋಜನೆಗೆ ಪರ್ಯಾಯ ಮಾರ್ಗ ಹುಡುಕುವ ಅಥವಾ ಯೋಜನೆಯನ್ನೇ ಕೈಬಿಡುವ ನಿರ್ಧಾರ ತೆಗೆದುಕೊಳ್ಳುತ್ತೇವೆ ಆದರೆ ಯಾವುದೇ ಕಾರಣಕ್ಕೂ ಶ್ರೀ ರಾಮಸೇತುವನ್ನು ಯಾವುದೇ ಕಾರಣಕ್ಕೂ ನಾಶಪಡಿಸಲು ಬಿಡುವುದಿಲ್ಲ. ಕೋಟಿಗಟ್ಟಲೆ ಹಿಂದುಗಳ ವಿಶ್ವಾಸ ಇದರಲ್ಲಿ ಅಡಕವಾಗಿರುವುದರಿಂದ ಈ ವಿಚಾರದಲ್ಲಿ ಯಾವುದೇ ಸಡಿಲಿಕೆಯಿಲ್ಲ. ಶ್ರೀ ರಾಮಸೇತುವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಿ, ಯುಎನ್‌ಓ ಮೂಲಕ ಇದನ್ನು ವಿಶ್ವ ಪರಂಪರೆಯ ತಾಣವೆಂಬ ಮಾನ್ಯತೆ ಕೊಡಿಸಲೂ ಸಹ ಯತ್ನಿಸುತ್ತೇವೆ.**

**ಹಿಂದುತ್ವ**

ಹಿಂದುತ್ವ ವಿಚಾರದಲ್ಲಿ ಭಾಜಪ ಸದಾ ಪ್ರತಿರೋಧವನ್ನು ಎದುರಿಸುತ್ತದೆ.

ಹಿಂದುತ್ವದ ಅರ್ಥ ತಿಳಿಸಲು ಒಂದು ಉದಾಹರಣೆ ನೀಡಬಯಸುತ್ತೇನೆ. ಆಗಸ್ಟ್ 2009ರಲ್ಲಿ ಖ್ಯಾತ ಬರಹಗಾರ ಲಿಸಾ ಮಿಲ್ಲರ್ ಅವರು, 'ನಾವೆಲ್ಲರೂ ಹಿಂದುಗಳೇ' ಎಂಬ ಲೇಖನವನ್ನು ಅಂತಾರಾಷ್ಟ್ರೀಯ ಪ್ರತಿಷ್ಠೆಯ ಸಾಪ್ತಾಹಿಕ ನ್ಯೂಸ್ ವೀಕ್‌ನಲ್ಲಿ ಪ್ರಕಟಿಸಿದ್ದರು. ಅಮೇರಿಕನ್ನರು ಹಿಂದು ಧರ್ಮಕ್ಕೆ ಮತಾಂತರಗೊಳ್ಳುವರೇ ಎಂದು ಈ ಲೇಖನ ಓದಿದವರಿಗೆ ಭಾಸವಾಗುತ್ತದೆ. ಅಮೇರಿಕನ್ನರಲ್ಲಿ ಹಲವರು ಶಾಖಾಹಾರಿ ತಿನಿಸು, ಯೋಗ, ಧ್ಯಾನ, ಸಸ್ಯ ಔಷಧದ ಕಡೆಗೆ ಆಕರ್ಷಿತರಾಗುವ ಜೊತೆಗೆ ದೇವರನ್ನು ಕಾಣುವ, ಒಂದಕ್ಕಿಂತ ಹೆಚ್ಚಿನ ವಿಚಾರಗಳತ್ತಾ ಮತ್ತು ಒಂದಕ್ಕಿಂತ ಹೆಚ್ಚಿನ ಬಗೆಯ ಆರಾಧನೆಯತ್ತಾ ಆಕರ್ಷಣೆಯಾಗುವ ಹಾಗೂ ಪುನರ್ಜನ್ಮದಲ್ಲಿ ನಂಬಿಕೆ ಹೆಚ್ಚುತ್ತಿರುವ ಪ್ರವೃತ್ತಿ ಕಂಡುಬಂದಿದೆ ಎಂದು ಪುಸ್ತಕದಲ್ಲಿ ತಿಳಿಸಲಾಗಿದೆ. ಅರಿವಿಲ್ಲದೆ, ಅಮೇರಿಕಾದ ಜನ ಹಿಂದು ಜೀವನ ಮೌಲ್ಯಗಳನ್ನು ಅನುಸರಿಸುತ್ತಿದ್ದಾರೆ. ಹಿಂದುತ್ವ ಒಂದು ಪಂಥವಾಗಿರದೆ ಅನುಸರಿದ ವ್ಯಕ್ತಿಗೆ ಬಹು ಆಯಾಮದ ಮುದನೀಡುವ ಜೀವನ ಶೈಲಿಯಾಗಿದೆ ಎಂದು ಲೇಖನದಿಂದ ಸ್ಪಷ್ಟವಾಗಿದೆ. ಸರ್ವೋಚ್ಚ ನ್ಯಾಯಾಲಯವು 1995ರಲ್ಲಿ ನೀಡಿದ ತೀರ್ಪಿನ ಅನುಸಾರ ಹಿಂದುತ್ವ ಒಂದು ಧರ್ಮ ಅಥವಾ ಪಂಥವಾಗಿರದೆ ಅದೊಂದು ಜೀವನಶೈಲಿಯಾಗಿದೆ ಎಂದು ತಿಳಿಸಿತ್ತು. ಸ್ನೇಹಿತರೆ, ಹಿಂದುತ್ವ ಒಂದು ಜೀವನ ಶೈಲಿಯಾಗಿದ್ದು, ಕೇವಲ ಭಾರತವಲ್ಲದೇ ಇಡೀ ವಿಶ್ವಕ್ಕೆ ಶಾಂತಿ ಹಾಗೂ ಅಹಿಂಸೆಯ ಸಂದೇಶ ಸಾರುತ್ತದೆ. ವಿಶ್ವಕ್ಕೆ ಬುದ್ಧ ಹಾಗೂ ಗಾಂಧಿಯನ್ನು ಅದು ನೀಡಿದೆ. ಧರ್ಮ ಅಥವಾ ಮಾನವತೆಯಲ್ಲದೆ, ಜೀವಿತ ಮತ್ತು ನಿರ್ಜೀವ ವಸ್ತುಗಳಲ್ಲೂ ದಿವ್ಯತೆ ಕಾಣುವ ಜೀವನ ಶೈಲಿಯಿದಾಗಿದೆ. ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರು ಪ್ರತಿಪಾದಿಸಿದ ಅಖಂಡ ಮಾನವೀಯತೆಯು ನಮ್ಮ ರಾಜಕೀಯ ಸಿದ್ಧಾಂತವೂ ಆಗಿದ್ದು ಭಾರತೀಯ ಸಂಸ್ಕೃತಿಯ ಶಾಶ್ವತ ಮೌಲ್ಯಗಳ ಪ್ರಸ್ತುತ ವಿವರಣೆಯನ್ನೂ ಅದು ನೀಡುತ್ತದೆ.

**ಹಿಂದುತ್ವ ಹಾಗೂ ಅಲ್ಪಸಂಖ್ಯಾತರು**

ಹಿಂದುತ್ವ ಒಂದು ಜೀವನ ಶೈಲಿಯಾದ ಕಾರಣ ವಿಶ್ವದ ಅನ್ಯ ಧರ್ಮಗಳು ಅಸ್ತಿತ್ವದಲ್ಲಿವೆ. ಸ್ನೇಹಿತರೆ, ಎಲ್ಲಾ ಧರ್ಮಗಳಲ್ಲದೆ ಅದರ ವಿವಿಧ ಪಂಗಡಗಳನ್ನು ಹೊಂದಿರುವ ವಿಶ್ವದ ಏಕೈಕ ದೇಶವೆಂದರೆ ಅದು ಭಾರತ. ನನ್ನ ಅರಿವಿನ ಪ್ರಕಾರ, ಇಸ್ಲಾಂ ಧರ್ಮದಲ್ಲಿ 72 ಫಿರ್ಕಿಗಳಿವೆ. ಈ ಎಲ್ಲಾ 72 ಫಿರ್ಕಿಗಳ ಅನುಯಾಯಿಗಳು ಹೊಂದಿರುವ ವಿಶ್ವದ ಏಕೈಕ ದೇಶವೆಂದರೆ ಅದು ಭಾರತ. ಕ್ರೈಸ್ತರಲ್ಲಿ, ರೋಮನ್ ಕ್ಯಾಥೊಲಿಕ್, ಪ್ರೊಟೆಸ್ಟೆಂಟ್, ಸೆವೆಂತ್ ಡೇ ಅಡ್ವಂಟಿಸ್ಟ್ ಹಾಗೂ ಇವೇಂಜಲಿಸ್ಟ್‌ರ ಜೊತೆ ಈಸ್ಟ್ರನ್ ಆರ್ಥೊಡಾಕ್ಸ್ ಹಾಗೂ ಸೀರಿಯನ್ ಚರ್ಚ್‌ನ ಅನುಯಾಯಿಗಳು ಭಾರತದಲ್ಲಿದ್ದಾರೆ. ವಿಶ್ವದಲ್ಲಿ ಯಹೂದಿಯರನ್ನು ಹಿಂಸಿಸದ ಏಕೈಕ ರಾಷ್ಟ್ರವೆಂದರೆ ಅದು ಭಾರತ. ಪಾರ್ಸಿಗಳನ್ನು ಕೇವಲ ಭಾರತದಲ್ಲಿ ಕಾಣಬಹುದು. ಆದ್ದರಿಂದ ಭಾರತದ ಸಮಗ್ರ ಸಂಸ್ಕೃತಿಯೆ ಹಿಂದುತ್ವ. ನಾವು ನಮ್ಮ ಸಿದ್ಧಾಂತದ ಸ್ಫೂರ್ತಿಯನ್ನು ಅದರಿಂದ ಪಡೆಯುತ್ತೇವೆ.

ಈ ಒಂದು ಆಲೋಚನೆಯ ಸ್ಫೂರ್ತಿ ಪಡೆದ ಭಾರತೀಯ ಜನತಾ ಪಾರ್ಟಿ ಸಮಾಜದಲ್ಲಿ ಧರ್ಮ ಅಥವಾ ಪಂಗಡದ ಆಧಾರದ ಮೇಲೆ ಎಂದೂ ಭೇದಭಾವ ಮಾಡಿಲ್ಲ. ಪಕ್ಷದ ಕಾರ್ಯಕರ್ತನಾಗಿ ಸದಾ ಈ ಅಂಶವನ್ನು ಮನದಟ್ಟು ಮಾಡಿಕೊಂಡಿದ್ದೇನೆ. **ಉತ್ತರಪ್ರದೇಶ ಮುಖ್ಯ ಮಂತ್ರಿಯಾಗಿದ್ದ ಸಮಯದಲ್ಲಿ ಸಮಾಜದ ವಿವಿಧ ವರ್ಗಗಳ ಪಂಚಾಯತಿಯನ್ನು ಮುಖ್ಯಮಂತ್ರಿಗಳ ನಿವಾಸದಲ್ಲಿ ಏರ್ಪಡಿಸಿದಾಗ, ಅರಬ್ಬಿ ಹಾಗೂ ಪರ್ಶಿಯಾದ ಮದ್ರಸಾಗಳ ಪಂಚಾಯತಿಯನ್ನು ಏರ್ಪಡಿಸಿದ್ದೆ.**

ಈ ಒಂದು ಜೀನವ ಶೈಲಿಯ ಅನುಸರಣೆಯಿಂದಲೇ, ಮಾನವ ಇತಿಹಾಸದಲ್ಲಿಯೇ, ಅನ್ಯ ರಾಷ್ಟ್ರಗಳ ಮೇಲೆ ದಂಡೆತ್ತಿ ಹೋಗದ ಮತ್ತು ಅನ್ಯ ಪ್ರಾಂತ್ಯಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳದ ವಿಶ್ವದ ಏಕೈಕ ರಾಷ್ಟ್ರವೆಂದರೆ ಅದು ಭಾರತ. ಅನ್ಯ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡದ ವಿಶ್ವದ ಏಕೈಕ ರಾಷ್ಟ್ರವೆಂದರೆ ಅದು ಭಾರತ. ವಿಶ್ವಗೆಲ್ಲುವ ಬದಲು ಮಾನವನ ಹೃದಯ ಗೆಲ್ಲುವ ಸ್ಫೂರ್ತಿ ನೀಡುವ ಜೀವನ ಶೈಲಿಯಿದಾಗಿದೆ. ಹಿಂದುತ್ವ ಕುರಿತು ಭಾಜಪ ಸ್ಪಷ್ಟ ನಂಬಿಕೆ ಹೊಂದಿದ್ದು, 1950ರಲ್ಲಿ ಯುವ ನಾಯಕರಾಗಿದ್ದ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಕೆಳಕಂಡ ಸಾಲುಗಳು ಅದನ್ನು ದೃಢ ಪಡಿಸುತ್ತದೆ.

> "Ho Kar swatantra maine kab chaha, main kar loon jag ko ghulam,
> Maine to sada sikhaya hai, karna apne man ko ghulam,
> Bhu-bhag nahi shat-shat manav ke hriday jitney ka nishchay,
> Hindu tan-man, Hindu jivan, rag-rag Hindu mera parichay."

**ಭಾರತದ ಭವಿಷ್ಯಕ್ಕಾಗಿ ಕೇವಲ ಭಾಜಪ ಯಾಕೆ**

ಸ್ನೇಹಿತರೆ, ಭಾರತ ಯುವಕರ ರಾಷ್ಟ್ರವಾಗಿದೆ ಹಾಗೂ 21ನೇ ಶತಮಾನದಲ್ಲಿ ಭಾರತವನ್ನು ಮಹಾನ್ ರಾಷ್ಟ್ರವಾಗಿ ನೋಡುವ ಆಸೆ ಎಲ್ಲಾ ಯುವಕರಿಗಿದೆ. ಆದರೆ 21ನೇ ಶತಮಾನದ ಮಹಾನ್ ರಾಷ್ಟ್ರವಾಗುವ ಸಾಮರ್ಥ್ಯ ಹಾಗೂ ದೂರದೃಷ್ಟಿತ್ವ ನಮ್ಮಲ್ಲಿದೆಯೆ. ಸ್ನೇಹಿತರೆ, ಇಂದು ಇಡೀ ದೇಶ ಭಾಜಪದತ್ತಾ ನೋಡುತ್ತಿದೆ. ಕಾಂಗ್ರೆಸ್ ಸ್ವಾತಂತ್ರ್ಯದ ಪೂರ್ವದಲ್ಲಿ ಅಸ್ತಿತ್ವಕ್ಕೆ ಬಂತು, 19ನೇ ಶತಮಾನದಲ್ಲಿ ಬ್ರಿಟೀಷರು ಇದನ್ನು ಸ್ಥಾಪಿಸಿದರು ಹಾಗೂ ೨೦ನೇ ಶನಮಾನದಲ್ಲಿ ತನ್ನ ಉಚ್ಚಾ್ರಯ ಸ್ಥಿತಿಯನ್ನು ಅದು ಕಂಡಿತು. ಭಾಜಪ ಅಸ್ತಿತ್ವಕ್ಕೆ ಬಂದದ್ದು ಸ್ವಾತಂತ್ರ್ಯಾ ನಂತರ 20ನೇ ಶತಮಾನದಲ್ಲಿ ಹಾಗೂ ಭಾರತ 21ನೇ ಶತಮಾನಕ್ಕೆ ಕಾಲಿಟ್ಟಾಗ, ದೇಶದ ನಾಯಕತ್ವ ಭಾಜಪ ಕೈಯಲ್ಲಿ ಅಟಲ್‌ಜಿ ಅವರ ನಾಯಕತ್ವದಲ್ಲಿತ್ತು. **ಸ್ನೇಹಿತರೆ, 20ನೇ ಶತಮಾನ ಕಾಂಗ್ರೆಸ್‌ದಾಗಿತ್ತು ಹಾಗೂ 21ನೇ ಶತಮಾನ ಸೇರಬೇಕಾದ್ದು ಭಾಜಪಗೆ.**

ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದು  ಸ್ವಾತಂತ್ರ್ಯಾ ಪೂರ್ವದ ಎಲ್ಲಾ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿತು. ದಾಸ್ಯದ ಮನೋಸ್ಥಿತಿಯಿಂದ ಹೊರಬರಲು ಭಾರತಕ್ಕೆ ಸಾಧ್ಯವಾಗಲಿಲ್ಲ. ನಮ್ಮ ರಾಜಕೀಯ ಹಾಗೂ ಆರ್ಥಿಕ ಸಿದ್ಧಾಂತಗಳು ಕೆಲವೊಮ್ಮೆ ರಷ್ಯಾ ದೇಶವನ್ನು ಮತ್ತೆ ಕೆಲವೊಮ್ಮೆ ಅಮೇರಿಕವನ್ನು ಅನುಕರಿಸಿದವು. ಬ್ರಿಟೀಷರ ಪ್ರಭಾವದಿಂದ ದಾಸ್ಯದ ಮನೋಸ್ಥಿತಿ ಹಾಗೆ ಉಳಿದ ಕಾರಣ, ನಮ್ಮ ಸಾಂಪ್ರದಾಯಿಕ ಜ್ಞಾನ ಹಾಗೂ ವಿಜ್ಞಾನಗಳ ಕಡೆಗಣನೆ ಮುಂದುವರೆಯಿತು. ವಿಶ್ವದ ಭೌತಿಕ ರಾಜಧಾನಿಯಾಗುವ ಸಾಮರ್ಥ್ಯ ಭಾರತಕ್ಕಿದೆ ಎಂದು ಇಂದು ವಿಶ್ವದ ಎಲ್ಲೆಡೆ ಅಭಿಪ್ರಾಯವಿದೆ.

ನನ್ನ ಈ ಎಲ್ಲಾ ಅನಿಸಿಕೆಗಳು ರಾಜಕೀಯ ಪಕ್ಷಪಾತದಿಂದ ಕೂಡಿರದೆ, ವಸ್ತುಸ್ಥಿತಿಯನ್ನು ಆಧರಿಸಿದೆ. ನಿಮ್ಮೆಲ್ಲರ ಹತ್ತಿರ ಮೊಬೈಲ್ ಫೋನ್‌ಯಿದೆ ಹಾಗೂ ನಾವು ಇರುವುದು ಸಂವಹನಾ ಕ್ರಾಂತಿಯ ಯುಗದಲ್ಲಿ. ಇವೆಲ್ಲವನ್ನು ಭಾರತ ಪಾಶ್ಚಾತ್ಯರಿಂದ ಕಲಿತಿದೆ. ಈ ಕುರಿತ ಪರಿಜ್ಞಾನದಿಂದ ನಾವು ಪರಿಣಿತಿ ಹೊಂದಿದ್ದೇವೆ, ಆದರೆ ನಾವು ಪ್ರಪಂಚಕ್ಕೆ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ನೀಡಿರುವ ಕೊಡಿಗೆಗಳು ಯಾವುದು. ವಿಶ್ವಕ್ಕೆ ಹೊಸ ತಂತ್ರಜ್ಞಾನ ನೀಡುವ ಸಾಮರ್ಥ್ಯ ಭಾರತಕ್ಕಿದೆಯೆ? ಹೌದು, ಆ ಸಂಪೂರ್ಣ ಸಾಮರ್ಥ್ಯ ನಮಗಿದೆ ಎಂಬ ನಂಬಿಕೆ ನನ್ನದು. ಆದರೆ, ಸ್ರಾತಂತ್ರ್ಯ ನಂತರ ಹಲವಾರು ವರ್ಷಗಳು ಅಧಿಕಾರದಲ್ಲಿದ್ದರು, ಕಾಂಗ್ರೆಸ್ ಎಂದೂ ಮೂಲ ವೈಜ್ಞಾನಿಕ ಸಂಶೋಧನೆಗೆ ಗಮನ ಹರಿಸಲಿಲ್ಲ. ಸತ್ಯ ಸಂಗತಿಯೆಂದರೆ, ಮೂಲ ವಿಜ್ಞಾನದ ಸಂಶೋಧನೆಗೆ ಒತ್ತು ಕೊಟ್ಟವರು ವಿಶ್ವದ ನಾಯಕರಾಗುತ್ತಾರೆ. ಇಂದು ವಿಶ್ವದ ಅತಿ ಶಕ್ತಿಶಾಲಿ ರಾಷ್ಟ್ರವಾದ ಅಮೇರಿಕ, ಆಟಂ ಬಾಂಬ್ ಅನ್ವೇಷಣೆಯಿಂದ ಮಹಾನ್ ಶಕ್ತಿಯಾಗಿ ರೂಪುಗೊಂಡಿತು.

ಭಾರತಕ್ಕೂ ಇಂತಹ ಸಾಧನೆ ಮಾಡುವ ಸಾಮರ್ಥ್ಯವಿದೆ. ಸ್ನೇಹಿತರೆ, ನಾನು ಭೌತ ವಿಜ್ಞಾನದ ವಿದ್ಯಾರ್ಥಿಯಾಗಿದ್ದೆ, ಆದಕಾರಣ ಮೂಲ ಭೌತ ವಿಜ್ಞಾನ ಕ್ಷೇತ್ರದಲ್ಲಿ  ನಡೆಯುತ್ತಿರುವ ಪ್ರಯೋಗಗಳತ್ತಾ ನಿಮ್ಮ ಗಮನ ಹರಿಸಲು ಇಚ್ಛಿಸುತ್ತೇನೆ. ಮೊಬೈಲ್, ಟಿ.ವಿ. ಹಾಗೂ ಅಂತರ್ಜಾಲ ಎಲ್ಲವೂ ಡಿಜಿಟಲ್ ಸಂಕೇತದ ಮೇಲೆ ಕಾರ್ಯವಹಿಸುತ್ತದೆ ಎಂದು ನಿಮ್ಮೆಲ್ಲರಿಗೂ ಗೊತ್ತಿದೆ. ನೂರು ವರ್ಷಗಳ ಹಿಂದೆ ಕ್ವಾಂಟಂ ಮೆಕಾನಿಕ್ಸ್ ಆವಿಷ್ಕಾರವಾದ ಕಾರಣವೇ ಡಿಜಿಟಲ್ ಸಂಕೇತಗಳನ್ನು ಹುಡುಕಲು ಸಾಧ್ಯವಾಯಿತು. ವೆರ್ನರ್ ಹೀಸೆನ್‌ಬರ್ಗ್ ಎಂಬಾತ ಅನಿಶ್ಚಿತ ತತ್ವಗಳನ್ನು ಪ್ರತಿಪಾದಿಸಿದ್ದರಿಂದಲೇ ಕ್ವಾಂಟಂ ಮೆಕಾನಿಕ್ಸ್ ಕಂಡುಹಿಡಿಯಲು ಸಾಧ್ಯವಾಯಿತು. ಹೀಸೆನ್‌ಬರ್ಗ್ ಅವರು ಅನಿಶ್ಚಿತ ತತ್ವಗಳನ್ನು ಕಂಡುಹಿಡಿಯದೇ ಇದ್ದಿದ್ದರೆ, ಕ್ವಾಂಟಂ ಮೆಕಾನಿಕ್ಸ್ ಹೊರ ಹೊಮ್ಮುತ್ತಿರಲಿಲ್ಲ. ಆದ್ದರಿಂದ ಈ ಯುಗದ ಡಿಜಿಟಲ್ ಸಂಕೇತ ಹಾಗೂ ಸಂವಹನದ ಬೆಳವಣಿಗೆ ಇಷ್ಟು ಪ್ರಮಾಣಕ್ಕೆ ಬೆಳೆಯಲು ಸಾದ್ಯವೂ ಆಗುತ್ತಿರಲಿಲ್ಲ.

ಹೀಸೆನ್‌ಬರ್ಗ್ ಅವರು ಅನಿಶ್ಚಿತತೆಯ ತತ್ವವನ್ನು ಕಲಿತದ್ದು ನಮ್ಮ ದೇಶದ ವೇದಗಳು ಸಾರುವ ಸಿದ್ಧಾಂತಗಳಿಂದ. ಹೀಸನ್‌ಬರ್ಗ್ 1929ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು ಹಾಗೂ ರಬೀಂದ್ರನಾಥ್ ಟ್ಯಾಗೋರ್ ಅವರನ್ನು ಭೇಟಿ ಮಾಡಿದ್ದರು. ಈ ಭೇಟಿ ಸಂದರ್ಭದಲ್ಲಿ ಅವರು ಟ್ಯಾಗೋರ್ ಅವರೊಂದಿಗೆ ವೇದ ಶಾಸ್ತ್ರ ಹಾಗೂ ಸೈದ್ಧಾಂತಿಕ ಭೌತವಿಜ್ಞಾನದ ವಿಚಾರಗಳನ್ನು ಚರ್ಚಿಸಿದ್ದರು. ಹೀಸೆನ್‌ಬರ್ಗ್ ಅವರ ಸಹಾಯಕ ಹಾಗೂ ಆಸ್ಟ್ರಿಯಾದ ವಿಜ್ಞಾನಿ ಫ್ರಿಟ್‌ಜಾಫ್ ಕಾಪ್ರ ಅವರು ತಮ್ಮ ಪುಸ್ತಕ 'ಅನ್‌ಕಾಮನ್ ವಿಸ್ಡಂ' ಎಂಬ ಪುಸ್ತಕದ ಪುಟ ಸಂಖ್ಯೆ 42 ಹಾಗೂ 43 ರಲ್ಲಿ ಹೀಗೆ ಬರೆದಿದ್ದಾರೆ, "1929ರಲ್ಲಿ

ಹೀಸನ್‌ಬರ್ಗ್ ಅವರು ಭಾರತದಲ್ಲಿ ಕೆಲವು ಸಮಯ ತಂಗಿದ್ದಾಗ, ಪ್ರಖ್ಯಾತ ಭಾರತೀಯ ಕವಿ ರವೀಂದ್ರನಾಥ್ ಟ್ಯಾಗೋರ್ ಅವರ ಅತಿಥಿಯಾಗಿದ್ದಾಗ, ವಿಜ್ಞಾನ ಮತ್ತು ಭಾರತೀಯ ವೇದಾಂತದ ಕುರಿತು ದೀರ್ಘ ಸಮಾಲೋಚನೆ ನಡೆಸಿದ್ದರು. ಭಾರತೀಯ ವಿಜ್ಞಾನದ ಅರಿವಿನಿಂದ ಹೀಸನ್‌ಬರ್ಗ್ ಮಹಾನ್ ದಾರ್ಶನಿಕನಾಗಲು ಸಾಧ್ಯವಾಯಿತು. ಭಾರತೀಯ ಆಧ್ಯಾತ್ಮಿಕ ಸಂಪ್ರದಾಯದ ಮೂಲ ತತ್ವಗಳಾದ ಸಾಪೇಕ್ಷತೆ, ಅಂತರ–ಸಂಪರ್ಕ ಹಾಗೂ ಅಶಾಶ್ವತ, ಇವುಗಳು ದೈಹಿಕ ಸತ್ಯದ ಮೂಲ ಆಂಶಗಳಾಗಿವೆ ಎಂದು ಅರ್ಥ ಮಾಡಿಕೊಂಡರು. ಭಾರತದ ಪುರಾತನ ತತ್ವಜ್ಞಾನದ ಅರಿವಿಲ್ಲದೆ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. 'ಟ್ಯಾಗೋರ್ ಅವರೊಂದಿಗೆ ನಡೆಸಿದ ಸಂಭಾಷಣೆಯ ನಂತರ', ಅವರು ತಿಳಿಸುತ್ತಾ, ' ವಿಚಿತ್ರವೆನಿಸಿದ ಕೆಲವು ಆಲೋಚನೆಗಳು ಅರ್ಥಗರ್ಭಿತ ವಾಗಿವೆ ಎಂದು ಭಾಸವಾಯಿತು. ಇದರಿಂದ ನನಗೆ ಬಹಳ ಸಹಾಯವಾಯಿತು."

ಕಳೆದ ವರ್ಷ ಜುಲೈನಲ್ಲಿ, ಯುರೋಪಿನ ಸಿಇಆರ್‌ಎನ್ ಪ್ರಯೋಗಾಲಯದಲ್ಲಿ ದೇವಕಣವನ್ನು ಪತ್ತೆಹಚ್ಚಲಾಯಿತು, ಇದಕ್ಕೆ ವೈಜ್ಞಾನಿಕವಾಗಿ ಹಿಗ್ಸ್ ಬಾಸನ್ ಎಂದು ನಾಮಕರಣ ಮಾಡಲಾಯಿತು. ಇದೊಂದು 21ನೇ ಶತಮಾನದ ಮಹಾನ್ ವೈಜ್ಞಾನಿಕ ಅನ್ವೇಷಣೆ ಎಂದು ಕರೆಯಲಾಗಿದೆ. ಈ ಒಂದು ಶೋಧದಿಂದ 21ನೇ ಶತಮಾನದಲ್ಲಿ ಮಾನವ ಜೀವನದಲ್ಲಿ ಅಗಾಧ ಮಾರ್ಪಾಡಾಗುವ ಸಾಧ್ಯತೆಯನ್ನು ತಿಳಿಸಲಾಗಿದೆ. ಈ ಕಣದ ಶೋಧವು ಪ್ರೋತ್ಸಾಹ ಪಡೆದುಕೊಂಡಿದ್ದು 70–80 ವರ್ಷಗಳ ಹಿಂದೆ ಇದೇ ತತ್ವಗಳ ಅಧ್ಯಯನ ನಡೆಸಿದ ಭಾರತದ ಮಹಾನ್ ವಿಜ್ಞಾನಿ ಸತ್ಯೇಂದ್ರನಾಥ್ ಬೋಸ್ ಅವರಿಂದ. ಈ ಕಣಕ್ಕೆ ವೈಜ್ಞಾನಿಕ ನಾಮಕಾರಣ ಮಾಡಿದ ಬೊಸಾನ್ ಪದವನ್ನು ಸತ್ಯೇಂದ್ರ ನಾಥ್ ಬೋಸ್ ಅವರ ಹೆಸರಿನಿಂದ ಪಡೆಯಲಾಗಿದೆ. ಎಸ್.ಎನ್.ಬೋಸ್ ಅವರು ಸದಾ ಧ್ಯಾನ ಮುದ್ರೆಯಲ್ಲಿದ್ದು, ಹಲವಾರು ವೈಜ್ಞಾನಿಕ ಸಮಸ್ಯೆಗಳಿಗೆ ಕರಾರುವಕ್ಕಾದ ಪರಿಹಾರ ಕಂಡುಹಿಡಿಯುತ್ತಿದ್ದರು. ಖ್ಯಾತ ವಿಜ್ಞಾನಿ ನೀಲ್ ಭೋರ್ ಅವರು ಸಹ ಬೋಸ್ ಅವರ ಸಾಮರ್ಥ್ಯವನ್ನು ಒಪ್ಪಿದ್ದಾರೆ.

ವರ್ತಮಾನದ ಡಿಜಿಟಲ್ ಕ್ರಾಂತಿಗೆ ಬೇಕಾದ ಮೂಲ ಸಿದ್ಧಾಂತ ನಮ್ಮಲ್ಲೇ ಉಪಸ್ಥಿತವಿತ್ತು ಹಾಗೂ ಭವಿಷ್ಯದ ವಿಕಾಸದ ಮೂಲ ಸಿದ್ಧಾಂತವೂ ನಮ್ಮಲ್ಲಿವೆ. ಲೋಪವಿರುವುದು ನಮ್ಮ ನೀತಿಯಲ್ಲಿ, ಮೂಲ ವಿಜ್ಞಾನದಲ್ಲಿ ಸಂಶೋಧನೆಯ ಕೊರೆಯಲ್ಲಿ ಹಾಗೂ ದಾಸ್ಯದ ಮನೋಸ್ಥಿತಿಯಿಂದ ಹೊರಬರದ ನಾವು ಮೂಲ ಸಂಶೋಧನೆಗಳ ಬೇರು ನಮ್ಮ ಸಾಂಪ್ರದಾಯಿಕ ಜ್ಞಾನದಲ್ಲಿದೆ ಎಂದು ಅಲೋಚಿಸಲೂ ಸಹ ನಾವು ಅಂಜುತ್ತೇವೆ.

ಈ ದೇಶದ ಆಳ್ವಿಕೆಯ ಜವಾಬ್ದಾರಿ ನಮಗೆ ಲಭಿಸಿದರೆ, ಮೂಲ ವಿಜ್ಞಾನ ಮತ್ತು ಭಾರತೀಯ ವಿಜ್ಞಾನದಲ್ಲಿ ಸಂಶೋಧನೆಗೆ ಉತ್ತೇಜನ ನೀಡುತ್ತೇವೆ. ಮೂಲ ವಿಜ್ಞಾನದ ಜೊತೆಗೆ ಸಾಂಪ್ರದಾಯಿಕ ಜ್ಞಾನದ ವಿವಿಧ ವೈಜ್ಞಾನಿಕ ಅಂಶಗಳ ಸಂಶೋಧನೆಗೂ ಒತ್ತು ನೀಡುತ್ತೇವೆ. ಮೂಲ ವಿಜ್ಞಾನ ಮತ್ತು ಮೂಲ ತಂತ್ರಜ್ಞಾನದಲ್ಲಿ ನಮ್ಮದೇ ಛಾಪು ಮೂಡಿಸಿದರೆ ಮಾತ್ರ, 21ನೇ ಶತಮಾನದಲ್ಲಿ ವಿಶ್ವದ ನಾಯಕತ್ವವನ್ನು ಭಾರತ ಪಡೆಯಲು ಸಾಧ್ಯ.

ಮೂಲ ವಿಜ್ಞಾನದಲ್ಲಿ ಸಂಶೋಧನೆಗೆ ಉತ್ತೇಜನ ನೀಡುವ ಮೂಲಕ ನವೀನ ಸ್ವದೇಶಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಸಾಧ್ಯ. ಆದ್ದರಿಂದ, ರಕ್ಷಣಾ ಉಪಕರಣದ ವಿಚಾರದಲ್ಲಿ ಸ್ವಾವಲಂಬನೆ ಸಾಧಿಸುವುದೇ

ನಮ್ಮ ಮತ್ತೊಂದು ಪ್ರಮುಖ ಆದ್ಯತೆಯಾಗಲಿದೆ. ರಕ್ಷಣಾ ವಲಯವನ್ನು ಸದೃಢ ಮಾಡುವ ಜೊತೆಗೆ ಹಲವು ಕೋಟಿ ಡಾಲರ್ ವಿದೇಶಿ ವಿನಿಮಯವನ್ನು ಉಳಿಸಲು ಸಾಧ್ಯವಾಗಲಿದೆ.

ಆಯುರ್ವೇದ, ಯೋಗ ಹಾಗೂ ಪರಿಸರ ರಕ್ಷಣೆ ವಿಚಾರದಲ್ಲಿ ಭಾರತದ ಕಾಣಿಕೆಯನ್ನು ವೀಕ್ಷಿಸಿದ ಜಗತ್ತು, ಗಣಿತ ಹಾಗೂ ವಿಜ್ಞಾನದ ವಿಚಾರದಲ್ಲೂ ವಿಸ್ತರಿಸಬಹುದಾಗಿದ್ದು, ದಾಸ್ಯದ ಯುಗದಲ್ಲಿ ಮರೆತ ಭಾರತದ ಸಾಂಪ್ರದಾಯಿಕ ಸಂಪತ್ತನ್ನು ಪ್ರೋತ್ಸಾಹಿಸಬಹುದಾಗಿದೆ.

ದಾಸ್ಯದ ಯುಗದಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಪಕ್ಷ ಆ ಯುಗದ ಮನೋಸ್ಥಿತಿಯಿಂದ ಹೊರಬರಲು ಸೋತಿದೆ. ಆದ್ದರಿಂದ ವಿಶ್ವ ಮಟ್ಟದಲ್ಲಿ ಭಾರತದ ನಿಜವಾದ ಸಾಮರ್ಥ್ಯವನ್ನು ರುಜುಪಡಿಸುವ ಆತ್ಮವಿಶ್ವಾಸ ಕಾಂಗ್ರೆಸ್ ಪಕ್ಷ ಹೊಂದಿಲ್ಲ. ನಾವು ಅಧಿಕಾರಕ್ಕೆ ಬಂದರೆ, ಭಾರತವನ್ನು ವಿಶ್ವದ ಭೌತಿಕ ರಾಜಧಾನಿ ಮಾಡುವ ದೂರದೃಷ್ಟಿತ್ವ ಭಾಜಪಗೆ ಇದ್ದು, ಅದಕ್ಕಿಂತ ಮಿಗಿಲಾಗಿ ಭಾರತವು ಜಗತ್‌ಗುರುವನ್ನಾಗಿ ಮಾಡುವ ಕನಸು ನಮ್ಮದು.

**ಪರ್ಯಾಯ ಅರ್ಥವ್ಯವಸ್ಥೆ**

20ನೇ ಶತಮಾನದ ಕಡೆಯ ದಶಕದಲ್ಲಿ ಸಮತಾವಾದದ ಶಕೆ ಕೊನೆಗೊಂಡಿತು ಹಾಗೂ 21ನೇ ಶತಮಾನದ ಮೊದಲ ದಶಕದಲ್ಲಿ ಬಂಡವಾಳಶಾಹಿಗಳು ಎಡವುತ್ತಿದ್ದಾರೆ. ಇಂದು ವಿಶ್ವಕ್ಕೆ ಹೊಸ ಪರ್ಯಾಯ ಆರ್ಥಿಕವ್ಯವಸ್ಥೆಯ ಆವಶ್ಯಕತೆ ಈ ಶತಮಾನದಲ್ಲೇ ಇದೆ. ಈ ಒಂದು ಪರ್ಯಾಯ ವ್ಯವಸ್ಥೆ ನೀಡುವ ಅವಕಾಶ ಕೇವಲ ಭಾರತಕ್ಕಿದೆ. ಇದನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆಯಿದೆ. ಈ ಒಂದು ಪರ್ಯಾಯದ ಆಲೋಚನೆಯನ್ನು ವಿಶ್ವದ ಇಬ್ಬರು ಮಹಾನ್ ಚೇತನಗಳಾದ ಭಗವಾನ್ ಬುದ್ಧ ಹಾಗೂ ಮಹಾತ್ಮಾ ಗಾಂಧಿಯವರು ನೀಡಿದ್ದಾರೆ. ಬುದ್ಧ ಸಮ್ಯಕ್ ವಿಚಾರ ಹಾಗೂ ಸಮ್ಯಕ್ ಕರ್ಮ ಎಂಬ ಪರಿಕಲ್ಪನೆಯನ್ನು ನಿಡಿದ್ದು, ಇದರಂತೆ ರಾಜಕೀಯ ಹಾಗೂ ಆರ್ಥಿಕ ಸಿದ್ಧಾಂತ ಅನುಸರಣೆಗೆ ಮಧ್ಯ ಮಾರ್ಗವನ್ನು ಸೂಚಿಸಿದ್ದಾರೆ. ಆಂದರೆ ಆ ಮಾರ್ಗ ಬಂಡವಾಳಶಾಹಿಗಳಂತೆಯೂ ಅಥವಾ ಸಮತಾವಾದಿಗಳಂತೆಯೂ ತೀವ್ರವಾದಗಳನ್ನು ಮಂಡಿಸುವುದಿಲ್ಲ.

ಭಾರತದ ಭವಿಷ್ಯದ ರೂಪುರೇಶೆಯ ಕುರಿತು ತಮ್ಮ ಪುಸ್ತಕ ಹಿಂದ್ ಸ್ವರಾಜ್‌ನಲ್ಲಿ ಮಹಾತ್ಮಾ ಗಾಂಧಿಯವರು 1909ರಲ್ಲಿ ಬರಿಯುತ್ತಾ, ಪಶ್ಚಿಮಾಭಿಮುಖವಾದ ಅಭಿವೃದ್ಧಿಯ ದೇಶಗಳತ್ತ ಬೆಳಕು ಚೆಲ್ಲಿದ ಅವರು, ಆ ದಿಕ್ಕಿನಲ್ಲಿ ಚಲಿಸುವ ಭಾರತ ಅಥವಾ ಇಡೀ ವಿಶ್ವ ಸಂಕೀರ್ಣ ಸಮಸ್ಯೆಗಳನ್ನು ಎದುರಿಸಲಿದೆ ಎಂದು ತಿಳಿಸಿದ್ದಾರೆ. ಇಂದು ನಾವು ಅಂತಹ ಪರಿಸ್ಥಿತಿಗೆ ಸಾಕ್ಷಿಯಾಗಿದ್ದೇವೆ.

**ಆದ್ದರಿಂದ, ಕೊಂಡು–ಕೊಳ್ಳುವ ತೀವ್ರ ಸ್ವರೂಪವನ್ನು ಬದಿಗೊತ್ತಿ, ಸೂಕ್ತ ಉಳಿತಾಯ ಪ್ರೊತ್ಸಾಹ, ನಿಸರ್ಗದೊಂದಿಗೆ ಉತ್ತಮ ಹೊಂದಾಣಿಕೆ, ಸಾಮಾಜಿಕ ಹೊಣೆಗಾರಿಕೆಗಳ ಈಡೇರಿಕೆ, ನೈತಿಕ ಮೌಲ್ಯಗಳನ್ನು ಸಂರಕ್ಷಿಸುವ ಹೊಸ ಸ್ವದೇಶಿ ಅರ್ಥವ್ಯವಸ್ಥೆಗೆ ಪ್ರೊತ್ರಾಹ, ಹೀಗೆ ನಮ್ಮ ಆರ್ಥಿಕ ಅಭಿವೃದ್ಧಿಯ ಪರ್ಯಾಯ ಮಾದರಿಯನ್ನು ಅನುಸರಿಸುವ ಅಗತ್ಯವಿದೆ. ಜಾಗತೀಕರಣಕ್ಕೆ ವಿರೋಧ ವ್ಯಕ್ತಪಡಿಸದೆ, ಅದರ ಎಲ್ಲಾ ದೋಶಗಳನ್ನು ದುರಸ್ತಿಗೊಳಿಸಿ, ಇಡೀ ಜಗತ್ತಿಗೆ ಹೊಸ ದಿಶೆ ತೋರುವ ಕಾರ್ಯ ಸಫಲವಾಗಲಿದೆ.**

ಆದ್ದರಿಂದ, 21ನೇ ಶತಮಾನದ ಭಾಜಪ ದೂರದರ್ಶಿತ್ವ ಕೆಳಕಂಡಂತಿವೆ:

- ವೆಚ್ಚದ ಬದಲು ಉಳಿತಾಯ ಆಧಾರಿತ ಪರ್ಯಾಯ ಮಾದರಿ
- ಮೂಲ ವಿಜ್ಞಾನದಲ್ಲಿ ಸಂಶೋಧನೆ
- ಸ್ವಾವಲಂಬಿ ರಕ್ಷಣಾ ಉತ್ಪಾದನೆ
- ಸಾವಯವ ಕೃಷಿ ಮತ್ತು ಅಯುರ್ವೇದ ಸೇರಿದಂತೆ ಭಾರತೀಯ ಸಾಂಪ್ರದಾಯಿಕ ಜ್ಞಾನಗಳ ಸಂಶೋಧನೆ

**'ವಿಶ್ವದ ಭೌತಿಕ ಹಾಗೂ ಕೃಷಿ ರಾಜಧಾನಿಯಾಗಿ ಭಾರತ'**

ಬಡತನ, ನಿರುದ್ಯೋಗದ ನಿರ್ಮೂಲನೆಯೊಂದಿಗೆ, ಭಾರತವನ್ನು ವಿಶ್ವದ ಬಲಿಷ್ಠ ರಾಷ್ಟ್ರವಾಗಿ ರೂಪುಗೊಳಿಸಿ, ಭಗವಂತ ರಾಮ, ಕೃಷ್ಣರಿಂದ ಭಗವಂತ ಬುದ್ಧಾ ಹಾಗೂ ಮಹಾತ್ಮಾ ಗಾಂಧಿಯವರೆಗೂ ನಮ್ಮ ದೇಶದ ಕುರುಹಾಗಿದ್ದ ಉನ್ನತ ಮಾನವ ಜೀವನ ಮೌಲ್ಯಗಳು ಜಾಗೃತವಾಗಲಿವೆ.

**ಬೂತ್ ಸಮಿತಿ**

ಭಾಜಪ ಒಂದು ಬೃಹತ್ ಸಂಸ್ಥೆಯಾಗಿದೆ. ಆದರೆ ಅದನ್ನು ಕನಿಷ್ಠ ವರ್ಗಗಳವರೆಗೂ ಮುಟ್ಟಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ನಮ್ಮ ಸಂಘಟನೆಯನ್ನು ಬೂತ್ ಮಟ್ಟಕ್ಕೆ ವಿಸ್ತರಿಸುವ ಕಾರ್ಯಕ್ರಮ ಜಾರಿಯಲ್ಲಿದೆ. ನಿರ್ದಿಷ್ಟ ಸಮಯದಲ್ಲಿ ಎಲ್ಲಾ ಬೂತ್ ಮಟ್ಟದ ಸಮಿತಿಗಳ ರಚನೆ ಖಚಿತಗೊಳಿಸಬೇಕು.

*ಕಾರ್ಯಕರ್ತ* **ಮತ್ತು ಸಂಘಟನೆ**

ಭಾರತೀಯ ಜನತಾ ಪಾರ್ಟಿಯು ಕಾರ್ಯಕರ್ತರನ್ನು ಆಧರಿಸಿದ ಸಂಘಟನೆಯಾಗಿದೆ. ಇಂದಿಗೂ ಸಹ ನಮ್ಮ ದೇಶವಾಸಿಗಳು ನಮ್ಮ ಕಾರ್ಯಕರ್ತರಿಂದ ವಿಶಿಷ್ಟ ಮತ್ತು ವಿಭಿನ್ನ ವರ್ತನೆಯನ್ನು ಬಯಸುತ್ತಾರೆ. ರಾಜಕಾರಣದಲ್ಲಿ, ಘನತೆ ಹಾಗೂ ಸಂಯಮಕ್ಕೆ ವಿಶೇಷ ಸ್ಥಾನವಿದೆ. **ರಾಜಕಾರಣದಲ್ಲಿ ನಯವಾದ ಸುಪ್ತ ಅಂಶವೆಂದರೆ, ರಾಜಕಾರಣಿ ಸಾಧಿಸಿದ್ದೇನು ಎನ್ನುವುದಕ್ಕಿಂತ ಸಾಧಿಸದೆ ಇದ್ದದ್ದು ಎಷ್ಟು ಎಂಬ ಲೆಖ್ಖಾಚಾರದ ಮೇಲೆ ಆತನ ಪ್ರತಿಷ್ಠೆಯ ಪರಕಾಷ್ಠತೆಯನ್ನು ಅಳೆಯಲಾಗುತ್ತದೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ಅವಕಾಶಗಳು ಮತ್ತು ಆಮಿಶಗಳ ಹೊರತಾಗಿಯೂ ಆತ ಸಾಧಿಸದೆಯಿದ್ದ ಅಂಶಗಳು ಯಾವುದು ಎಂಬುದು ಮುಖ್ಯ.**

ಭಾರತೀಯ ರಾಜಕಾರಣದ ಆದರ್ಶಗಳನ್ನು ಮಹಾತ್ಮ ಗಾಂಧಿಯವರು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿದ್ದರು. ಆತ್ಮಚರಿತ್ರೆ ಬರಹಗಾರ ಲೂಯಿಸ್ ಫಿಶರ್ ಅವರ ಪ್ರಕಾರ, ಅನ್ಯರು ಮಾಡಲು ಸಾಧ್ಯವಿದ್ದರೂ ಮಾಡದೇ ಇರುವ ಕಾರ್ಯಗಳನ್ನು ಸಾಧಿಸುವ ಗುಣದಲ್ಲಿಯೇ ಗಾಂಧಿಜೀಯವರ ಮಹಾನತೆ ಅಡಗಿದೆ ಎಂದಿದ್ದಾರೆ. ಇದರರ್ಥ, ನಾವು ಮಾಡದೇ ಇರುವ ವಿಚಾರಗಳ ಜೊತೆಗೆ, ಮಾಡಬೇಕಾದ ವಿಚಾರಗಳತ್ತ ಗಮನಹರಿಸಬೇಕು. **ಭಾಜಪ ಕಾರ್ಯಕರ್ತ ಯಾವುದನ್ನು ಮಾಡಬಾರದು ಎಂಬ ಸಂವೇದನೆ ನಮ್ಮ ದೇಶದ ಜನರಲ್ಲಿ ಹೆಚ್ಚಿದೆ.**

ನಮ್ಮ ಸಂಘಟನೆಯ ಮುಖ್ಯ ಘಟಕ ಕಾರ್ಯಕರ್ತನಾಗಿದ್ದಾನೆ. ತನ್ನ ಬಗ್ಗೆ, ತನ್ನ ಸಂಘಟನೆಯ ಬಗ್ಗೆ, ಸಮಾಜ ಮತ್ತು ದೇಶದ ಬಗ್ಗೆ ಸ್ಪಷ್ಟ ವಿಚಾರಗಳನ್ನು ಆತ ತಿಳಿದುಕೊಂಡಿರಬೇಕು. ಸಂಘಟನೆಯ ಸೈನಿಕನಂತೆ ಆತ ಈ ಎಲ್ಲಾ ನಾಲ್ಕು ವಿಷಯದಲ್ಲೂ ಆಧ್ಯತಾ ಶ್ರೇಣಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು.

ನನ್ನ ಅನಿಸಿಕೆಯಂತೆ, ವೈಯಕ್ತಿಕವಾಗಿ ಸಂಯಮವನ್ನು ರೂಡಿಸಿಕೊಳ್ಳುವುದು ಅತಿ ಮುಖ್ಯ. ಸಂಘಟನೆಯ ಮಟ್ಟದಲ್ಲಿ ಹಲವಾರು ಕಾರ್ಯಕರ್ತರೊಂದಿಗೆ ಕಾರ್ಯಮಾಡುವಾಗ, ಸಮನ್ವಯ ಅತಿಮುಖ್ಯವೆನಿಸುತ್ತದೆ. ಸಂಘಟನೆಯಲ್ಲಿ ಸಮನ್ವಯ ಸಾಧಿಸಿದ ನಂತರ ಸಮಾಜದ ಹಲವು ಸಮಸ್ಯೆಗಳ ನಿವಾರಣೆಗೆ ಕಾರ್ಯರ್ತನ ಪ್ರತಿಕ್ರಿಯೆಯು 'ಸೇವೆ ಮತ್ತು ಸಂಘರ್ಷದಿಂದ' ಪ್ರೇರಣೆ ಪಡೆಯಬೇಕು. ಸಾಮಾಜಿಕ ಸಂಘರ್ಷದ ಹಾದಿಯಲ್ಲಿ ಮುಂದೆ ಸಾಗಿದಾಗ ರಾಷ್ಟ್ರಮಟ್ಟದಲ್ಲಿ ಆಲೋಚಿಸುವಾಗ, ಕಾರ್ಯಕರ್ತನ ಪ್ರಮುಖ ಗುಣ 'ಸಮರ್ಪಣೆ'ಯಾಗಿರಬೇಕು. ಸಂಯಮದ ಶಕ್ತಿಯ ಬುನಾದಿಯ ಮೇಲೆ ವೈಯಕ್ತಿಕ ನಡತೆ, ಸಂಘಟನೆಯ ಸಮನ್ವಯದೊಂದಿಗೆ ಸಮಗ್ರ ಶಕ್ತಿಯ ಪ್ರಸಾರ ಹಾಗೂ ಸಮಾಜ ಕಲ್ಯಾಣಕ್ಕಾಗಿ ಸಂಘರ್ಷವೆಲ್ಲವೂ ಅಂತಿಮವಾಗಿ ಭಾರತ ಮಾತೆಯ ಪಾದಕ್ಕೆ ಸಮರ್ಪಣೆಯಾಗಬೇಕು.

ಈ ಎಲ್ಲಾ ಅಂಶಗಳ ಸಾರಾಂಶ ತೆಗೆದುಕೊಂಡರೆ, ಸಂಘಟನೆಯ ಕಾರ್ಯಕರ್ತನ ಮೂಲ ಮಂತ್ರ ಕೆಳಕಂಡಂತಿರಬೇಕು:

**ವೈಯಕ್ತಿಕ ಮಟ್ಟದಲ್ಲಿ 'ಸಂಯಮ'**
**ಸಂಘಟನಾ ಮಟ್ಟದಲ್ಲಿ 'ಸಮನ್ವಯ'**
**ಸಮಾಜ ಮಟ್ಟದಲ್ಲಿ 'ಸೇವೆ ಹಾಗೂ ಸಂಘರ್ಷ'**
**ರಾಷ್ಟ್ರ ಮಟ್ಟದಲ್ಲಿ 'ಸಮರ್ಪಣೆ'**

ಆದ್ದರಿಂದ, ಸಂಯಮ, ಸಮನ್ವಯ, ಸಂಘರ್ಷ ಮತ್ತು ಸಮರ್ಪಣೆ, ಇವೇ ನಮ್ಮ ಮುಖ್ಯ ಮಂತ್ರಗಳಾಗಿವೆ.

ದೇಶದ ಅಪರೂಪದ ಹಾಗೂ ನಿಷ್ಠಾವಂತ ಕಾರ್ಯಕರ್ತರನ್ನು ಭಾಜಪ ಹೊಂದಿದೆ ಎಂಬ ನಂಬಿಕೆ ನನ್ನದು. ನಾವು ಕರ್ತವ್ಯ ನಿಭಾಯಿಸುವಾಗ, ಅಂತಹ ಕಾರ್ಯದಿಂದ ಪಕ್ಷದ, ಸಂಘಟನೆಯ ಹಾಗೂ ದೇಶದ ಗೌರವ ಹೆಚ್ಚಬೇಕು ಎಂಬ ಗುರಿಯನ್ನು ನಾವು ಸದಾ ಮನದಟ್ಟುಮಾಡಿಕೊಳ್ಳಬೇಕು.

ಈ ಒಂದು ಹಿನ್ನಲೆಯಲ್ಲಿ, ಒಂದು ಉದಾಹರಣೆ ನೀಡ ಬಯಸುತ್ತೇನೆ. ಹನುಮಂತನು ಲಂಕೆಗೆ ಸೀಮೋಲಂಘನ ಮಾಡಿ, ಸೀತಾ ಮಾತೆಯನ್ನು ಪತ್ತೆಹಚ್ಚಿದ ನಂತರ, ಸೀತಾ ಮಾತೆ ಪರಿತಪಿಸುತ್ತಿರುವುದನ್ನು ಕಂಡಾಗ, ಆತ ತೆಗೆದುಕೊಂಡ ದೃಢನಿಶ್ಚಯವೆಂದರೆ, ಕೆಲವು ದಿವಸಗಳಲ್ಲಿ ದೇವಸ್ವರೂಪನಾದ ರಾಮನು ವಾನರ ಸೇನೆಯೊಂದಿಗೆ ಬಂದು ಎಲ್ಲಾ ದಾನವರನ್ನು ಕೊಂದು, ಸೀತೆಯನ್ನು ಶೋಕದಿಂದ ಮುಕ್ತಗೊಳಿಸಬೇಕು. ಆಗ ಸೀತೆ ಕೇಳಿದಳಂತೆ, ಎಲೈ ಮಗನೆ, ಕೋತಿಗಳು ತುಂಬಾ ಸಣ್ಣ ಹಾಗೂ ದುರ್ಬಲವಾಗಿವೆ ಆದರೆ, ದಾನವರು ಶಕ್ತಿಶಾಲಿಯಾಗಿದ್ದು ರಾಕ್ಷಸಗಾತ್ರದಲ್ಲಿದ್ದಾರೆ. ಆದ್ದರಿಂದ, ನನಗೆ ನಿನ್ನ ಮಾತಿನಲ್ಲಿ ಸಂದೇಹ ಮೂಡಿದೆ. ಆದಿಕವಿ ತುಳಸಿದಾಸನು ತನ್ನ ರಾಮಚರಿತಮಾನಸದಲ್ಲಿ ವಿವರಿಸಿದಂತೆ, ಆಗ ಹನುಮಂತನು ತನ್ನ ವಿರಾಟ ರೂಪವನ್ನು ತೋರುತ್ತ ಪುನಃ ತನ್ನ ಮೂಲ ರೂಪಕ್ಕೆ ಬಂದು ತನ್ನ ಕೈ ಜೋಡಿಸಿ ಈ ರೀತಿ ಬಿನ್ನವಿಸಿಕೊಂಡನಂತೆ:
'Abahin matu main jaun livai, prabhu ayasu nahi Ram duhai'

ಇದರರ್ಥ, 'ಓ ಮಾತೆ, ಕಪಿಗಳ ಸೈನ್ಯವೇನು, ನಿನ್ನನ್ನು ಈಗಲೇ ಮುಕ್ತಗೊಳಿಸಲು ನಾನೊಬ್ಬನೆ ಸಾಕು. ಆದರೆ ಹೀಗೆ ಮಾಡುವುದರಿಂದ, ಕಪಿಗಳ ಸೈನ್ಯ ಹಾಗೂ ನನ್ನ ಪರಮ ಪ್ರಿಯನಾದ ದೇವಸ್ವರೂಪ ಶ್ರೀ ರಾಮನ ಪ್ರತಿಷ್ಠೆ ಹೆಚ್ಚುವುದಿಲ್ಲ. ಆದ್ದರಿಂದಲೇ ಈ ಕೆಲಸವನ್ನು ನಾನು ಅವನೊಂದಿಗೆ ಸೇರಿ ಮಾಡಬಯಸುತ್ತೇನೆ.

ಆದ್ದರಿಂದ, ನಾವೆಲ್ಲಾ ಕಾರ್ಯಕರ್ತರು ವೈಯಕ್ತಿಕವಾಗಿ ಸಮರ್ಥರಾಗಿದ್ದರೂ, ಯಾವುದೇ ಕಾರ್ಯವನ್ನು ಏಕಾಂಗಿಯಾಗಿ ಮಾಡದೆ, ಒಗ್ಗಟ್ಟಿನ ಮನೋಭಾವದಿಂದ ಮಾಡುವ ಅಗತ್ಯವಿದೆ. ಹನುಮಂತನಂತೆ, ನಮ್ಮೆಲ್ಲಾ ನಮ್ಮ ಕರ್ತವ್ಯಗಳನ್ನು ಸಂಘಟನೆಯ ಪ್ರತಿಷ್ಠೆಯ ಉದ್ದೇಶದಿಂದ ಹಾಗೂ ದೇಶದ ಪ್ರತಿ ಸಮರ್ಪಣಾ ಭಾವದಿಂದ ಮಾಡಬೇಕಿದೆ.

**ಮುಂಬರುವ ಚುನಾವಣೆಗಳು**

ಸ್ನೇಹಿತರೆ, 2013ನೇ ಇಸವಿ ಪ್ರಾಮುಖ್ಯತೆ ಪಡೆದಿದೆ. ಕಲವೇ ತಿಂಗಳಲ್ಲಿ ಕರ್ನಾಟಕ ಚುನಾವಣೆ ಎದುರಿಸಲಿದೆ. ಈ ವರ್ಷ ನವೆಂಬರ್‌ನಲ್ಲಿ ಮಧ್ಯಪ್ರದೇಶ, ಛತ್ತೀಸ್‌ಘಡ್, ರಾಜಸ್ಥಾನ ಹಾಗೂ ದೆಹಲಿಯಲ್ಲಿ ಚುನಾವಣೆ ನಡೆಯಲಿವೆ. ಬಹುಪಾಲು ಜಾರ್ಖಂಡ್ ಚುನಾವಣೆಯೂ ಇದೇ ವರ್ಷ ನಡೆಯಬಹುದು. ಈ ಎಲ್ಲಾ ರಾಜ್ಯಗಳು ನಮಗೆ ಬಹಳ ಮುಖ್ಯ. ಲೋಕಸಭಾ ಚುನಾವಣೆಗಳೂ ಸಹ ಯಾವುದೇ ಸಮಯದಲ್ಲಿ ನಡೆಯುವ ಸಾಧ್ಯತೆಗಳಿವೆ. ಲೋಕಸಭಾ ಚುನಾವಣೆಯ ಮುನ್ನಾ ಬಹುಶಃ ಇದು ನಮ್ಮ ಕಡೆಯ ರಾಷ್ಟ್ರೀಯ ಪರಿಷತ್ ಸಭೆಯಿರಬಹುದು. ಈ ಸಭೆಯ ನಂತರ, ನಾವೆಲ್ಲಾ ಕಾರ್ಯಕರ್ತರು ನಮ್ಮ ಸ್ವಸ್ಥಳಗಳಿಗೆ ತೆರಳಿದ ಬಳಿಕ, ಗೆಲುವಿನ ಮನೋಭಾವದೊಂದಿಗೆ, ಎಲ್ಲಾ ಚುನಾವಣೆಗಳು ಕೊನೆಗೆ ಲೋಕಸಭಾ ಚುನಾವಣೆಗೂ ಸಿದ್ಧತೆ ನಡೆಸಬೇಕಾಗಿದೆ.

ಭಾರತ್ ಮಾತಾ ಕಿ ಜೈ!!